**ಶುಭಾಶಯ**
ನಮ್ಮೆಲ್ಲಾ ಓದುಗರಿಗೆ ಯುಗಾದಿ ಹಬ್ಬದ ಶುಭಾಶಯಗಳು.
- ಸಂಪಾದಕರು

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

**ಬಿಡುವು**
ಚಂದ್ರಮಾನ ಯುಗಾದಿ ಹಬ್ಬದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ಬಿಡುವು. ಕಾರಣ ನಾಳೆ ದಿನಾಂಕ 3ರ ಭಾನುವಾರದ ಸಂಚಿಕೆ ಪ್ರಕಟವಾಗುವುದಿಲ್ಲ.
- ವ್ಯವಸ್ಥಾಪಕರು

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಏಪ್ರಿಲ್ 02, 2022

ಸಂಪುಟ : 48 ಸಂಚಿಕೆ : 322 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 8 ರೂ : 5.00 www.janathavani.com janathavani@mac.com

TATA ಉತ್ಪಾದನೆ



TANISHQ
ಯುಗಾದಿ
ಹಬ್ಬದ ಹಾರ್ದಿಕ ಶುಭಾಶಯಗಳು

20%* ವರೆಗೆ ಕಡಿತ ಚಿನ್ನದ ಆಭರಣಗಳ ತಯಾರಿಕಾ ಶುಲ್ಕಗಳ ಮತ್ತು ವಜ್ರಾಭರಣದ ಮೌಲ್ಯದ ಮೇಲೆ

100%* ಯಾವುದೇ ಜ್ಯುವೆಲ್ಲರ್‌ನಿಂದ ಖರೀದಿಸಿದ ನಿಮ್ಮ ಹಳೆಯ ಚಿನ್ನಕ್ಕೆ ವಿನಿಮಯ ಮೌಲ್ಯ ಪಡೆಯಿರಿ.

ಶೋರೂಮ್: ನಂ.1, ಗ್ರೌಂಡ್ ಫ್ಲೋರ್, ತೋಶನಿ ಎಂಪೋರಿಯಾ, ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆ. ದೂ.ಸಂ: 63647 95111

St. Mary's Convent English Medium
Vinobanagara, Davanagere.
Mo: 94497 02778, 94819 09493

WANTED
Experienced and dedicated Teaching staff with fleuncy in English

| | | |
|---|---|---|
| 1. | English - B.A. M.A | 3 Posts |
| 2. | Hindi - B.A. B.Ed | 2 Posts |
| 3. | Maths - B.Sc. M.Sc | 2 Posts |
| 4. | Social Science - B.A.B.Ed | 2 Posts |
| 5. | Science - P.C.M. B.Sc. B.Ed | 2 Posts |

Admissions Open
From L.K.G. to 2nd PUC (Commerce) For the Academic Year 2022-23

ಹಬ್ಬದ ಕೊಡುಗೆ



ಇತ್ತೀಚಿನ ರೀಚಾರ್ಜೆಬಲ್ ಶ್ರವಣ ಉಪಕರಣಗಳು ನಂಬಲು ಅಸಾಧ್ಯವಾದ ಬೆಲೆಗೆ,
ಈಗಿರುವ ಶ್ರವಣ ಉಪಕರಣಗಳಿಗೆ ಆಕರ್ಷಕ ವಿನಿಮಯ ಕೊಡುಗೆ
ಕಣ್ಣಿಗೆ ಕಾಣದಷ್ಟು ಚಿಕ್ಕ ಉಪಕರಣಗಳು ಲಭ್ಯ

ಒರೆವ ಆರ್ ಎಸ್
99451 86993
081922 00383
#171/4ಎಬಿ, ಶಾಸ್ತ್ರಿ ಭವನ, ಪಿ.ಜೆ. ಬಡಾವಣೆ, ಕಾವೇರಿ ಫಾರ್ಮ ಎದುರು, ದಾವಣಗೆರೆ - 577 002.
ಒರೆವ ಆರ್ ಎಸ್
OREVA
www.orevarehab.com

ದಾವಣಗೆರೆ ಜಿಲ್ಲೆಯ ಸಮಸ್ತ ಜನತೆಗೆ ನೂತನ ಶುಭಕೃತು ನಾಮ ಸಂವತ್ಸರ ಹಾಗೂ ಯುಗಾದಿ ಹಬ್ಬದ ಶುಭಾಶಯಗಳು



ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಮಾನ್ಯ ಹಾಲಿ ಶಾಸಕರೂ, ಮಾಜಿ ಸಚಿವರಾದ
ಶ್ರೀ ಎಸ್.ಎ. ರವೀಂದ್ರನಾಥ್ ಇವರ ಶಿಫಾರಸ್ಸಿನ ಮೇರೆಗೆ ಜಲಸಂಪನ್ಮೂಲ ಇಲಾಖೆಯ ಭದ್ರಾ ಕಾಲೋನಿ ಆವರಣದಲ್ಲಿ ವಿಭಾಗ ಹಾಗೂ ಉಪ ವಿಭಾಗಗಳ ಕಛೇರಿ ನೂತನ ಕಟ್ಟಡ ಸಂಕೀರ್ಣದ ನಿರ್ಮಾಣ ಕಾಮಗಾರಿಗೆ
ಗುದ್ದಲಿ ಪೂಜೆ ಕಾರ್ಯಕ್ರಮ

ದಿನಾಂಕ 03.04.2022ನೇ ಭಾನುವಾರ
ಸಮಯ : ಬೆಳಿಗ್ಗೆ 11.30ಕ್ಕೆ
ಸ್ಥಳ : ಭದ್ರಾ ಕಾಲೋನಿ ಆವರಣ, ಹದಡಿ ರಸ್ತೆ, ದಾವಣಗೆರೆ.

ಕಾಮಗಾರಿ ಹೆಸರು:
ದಾವಣಗೆರೆ ನಗರದ ಜಲಸಂಪನ್ಮೂಲ ಇಲಾಖೆಯ ಭದ್ರಾ ಕಾಲೋನಿ ಆವರಣದಲ್ಲಿ ವಿಭಾಗ ಹಾಗೂ ಉಪ ವಿಭಾಗಗಳ ಕಛೇರಿ ನೂತನ ಕಟ್ಟಡ ಸಂಕೀರ್ಣದ ಗುದ್ದಲಿ ಪೂಜೆ ಕಾರ್ಯಕ್ರಮ

ಕಾಮಗಾರಿ ವಿವರ:
ಟೆಂಡರಿಗಿಟ್ಟ ಮೊತ್ತ : ರೂ. 311.16 ಲಕ್ಷಗಳು
ಗುತ್ತಿಗೆದಾರರು : ಮೆ॥ ಹೃಷಿಕೇಶ್ ಇನ್ಫ್ರಾ ಟೆಕ್ ಪ್ರೈ. ಲಿಮಿಟೆಡ್

ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ ಈ ಭಾಗದ ಎಲ್ಲಾ ಜನಪ್ರತಿನಿಧಿಗಳಿಗೂ, ಅಭಿಮಾನಿಗಳಿಗೂ, ಅಧಿಕಾರಿಗಳಿಗೂ, ಸರ್ವರಿಗೂ
ಹೃತ್ಪೂರ್ವಕ ಸುಸ್ವಾಗತ

॥ಶ್ರೀ ಮಾಲತೇಶ ಪ್ರಸನ್ನ॥
ಸರ್ವರಿಗೂ ಯುಗಾದಿ ಹಬ್ಬದ ಶುಭಾಶಯಗಳು

ದಿನಾಂಕ : 03.04.2022 ರ ರವಿವಾರ
ನೂತನವಾಗಿ ಪ್ರಾರಂಭಗೊಳ್ಳುವ
ಶ್ರೀ ಮಾಲತೇಶ ಹೋಂ ಅಪ್ಲೈಯನ್ಸಸ್
ವಿಶಾಲವಾದ ಗೃಹ ಉಪಯೋಗಿ ವಸ್ತುಗಳ ಮಾರಾಟ ಮಳಿಗೆ
ಕಂಬಳಿ ಸೊಸೈಟಿ ಹತ್ತಿರ, ಪಿ. ಬಿ. ರೋಡ್, ರಾಣೇಬೆನ್ನೂರು.
ಸರ್ವರಿಗೂ ಆದರದ ಆಹ್ವಾನ



ಮಾಲೀಕರು :
ಈಶ್ವರ ಎಂ. ಚಿನ್ನಿಕಟ್ಟೆ, ಮೊ: 82270 74132

ನಮ್ಮ ವಿಶೇಷತೆಗಳು :
- ಸುಲಭ ಕಂತುಗಳಲ್ಲಿ ಲಭ್ಯ
- ಸ್ನೇಹಿತರಲ್ಲಿ ಲಕ್ಕಿ ಕೂಪನ್ ಡ್ರಾ
- 30 ಕ್ಕೂ ಅಧಿಕ ಆಕರ್ಷಕ ಬಹುಮಾನಗಳು

ನಮ್ಮ ಅಂಗ ಸಂಸ್ಥೆ :
ಶ್ರೀ ಸಾಲೇಶ್ವರ ಪಟ್ಟಜ್ಯೋತಿ ಚಿಟ್ಸ್ ಪ್ರೈವೇಟ್, ಲಿಮಿಟೆಡ್



ಇವರಿಂದಲೂ ಯುಗಾದಿ ಹಬ್ಬದ ವಿಶೇಷತೆಗಳು...
ಹಣಕಾಸಿನ ಅವಶ್ಯಕತೆಯ ಗೆಳೆಯ, ಅತ್ಯುತ್ತಮ ಮರು ಗಳಿಕೆ * ಕಾಯ್ದೆಗಳ ಪರಿಪಾಲನೆ ಮುಖಾಂತರ ನಿಮ್ಮ ಹಣಕ್ಕೆ ಭದ್ರತೆ
ಹೆಚ್ಚಿ ಮಾಹಿತಿಗಾಗಿ ಸಂಪರ್ಕಿಸಿರಿ :
ಫೋ. : 99013 68015, 98801 60161, 97310 70307

HONDA

ಹೊಸ ವಾಹನದ ಖರೀದಿಯೊಂದಿಗೆ ಬೆಳ್ಳಿ ನಾಣ್ಯ, ಸೀಟ್ ಕವರ್ ಮತ್ತು ಹೆಲ್ಮೇಟ್ ಉಚಿತ



ಹೊಸ ಆರಂಭದ
Shine
ಯುಗಾದಿ ಹಬ್ಬದ ಶುಭಾಶಯಗಳು

ಈ ಕೊಡುಗೆ ಮಾರ್ಚ್ 28 ರಿಂದ ಏಪ್ರಿಲ್ 04 ರವರೆಗೆ
* Conditions Apply

BOOK ONLINE NOW!
CLICK BOOK RELAX

ವಾಣಿ ಹೋಂಡಾ
Head Office : ಪಿ.ಬಿ.ರೋಡ್, ದಾವಣಗೆರೆ. ಫೋನ್: 08192-231677, ಮೊ: 97312 33378.
(ASC) ನಂದಿ ಪೆಟ್ರೋಲ್ ಬಂಕ್ ಎದುರು, ಪಿ.ಬಿ.ರಸ್ತೆ, ದಾವಣಗೆರೆ. ಫೋನ್: 87222 76197
Branches : ವಾಣಿ ಹೋಂಡಾ, ಹರಿಹರ ಮೊ: 98868 10179, ಹೊನ್ನಾಳಿ ಮೊ: 98454 37634, ಚನ್ನಗಿರಿ ಮೊ: 98447 57555, ಮಲೇಬೆನ್ನೂರು (ASC) ಮೊ: 98866 18484, ತ್ಯಾವಣಗಿ (ASC) ಮೊ: 80734 00724, ಸಾಸ್ವೆಹಳ್ಳಿ (FO) ಮೊ: 97408 94560

ಹೃದಯಪೂರ್ವಕ ಅಭಿನಂದನೆಗಳು



ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯದ ಶೈಕ್ಷಣಿಕ ಮಂಡಳಿಯ ಸದಸ್ಯರಾಗಿ ನೇಮಕಗೊಂಡಿರುವ ದಾವಣಗೆರೆಯ ಎಸ್.ಎಸ್. ಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ನಮ್ಮೆಲ್ಲರ ಆತ್ಮೀಯ ಸ್ನೇಹಿತ
ಡಾ॥ ಬಿ.ಎಸ್. ಪ್ರಸಾದ್
DCH, MD (Paed), MRCP (UK), CCT (UK), FRCPCH (UK), MRCPCH Examiner
ಅವರಿಗೆ ನಮ್ಮೆಲ್ಲರ ಹೃದಯಪೂರ್ವಕ ಅಭಿನಂದನೆಗಳು....

- ಬಿ.ಪಿ. ಹರೀಶ್, ಮಾಜಿ ಶಾಸಕರು, ಹರಿಹರ.
- ಪಿ.ಹೆಚ್. ರಮೇಶ್, ವಿಐಎಸ್ಎಲ್, ಭದ್ರಾವತಿ.
- ಪಿ.ಆರ್. ಬಸವರಾಜ್, ವ್ಯವಸಾಯಗಾರರು
- ಅಂಬರ್‌ಕರ್ ಚಿತ್ತರಂಜನ್, ಅಂಬರ್‌ಕರ್ ಪೇಂಟ್ಸ್
- ಜಿ.ವಿ. ಮಾಲತೇಶ್, ಮಾಲತೇಶ್ ಫರ್ನೀಚರ್ಸ್
- ಓಂಕಾರಪ್ಪ, ಇಂಜಿನಿಯರ್
- ಪಲ್ಲಾಗಟ್ಟೆ ರವಿಶಂಕರ್, ಕಾರ್ಯದರ್ಶಿಗಳು, ದಾವಣಗೆರೆ ಕ್ಲಬ್
- ಟಿ.ಎಂ. ರಾಜೇಂದ್ರ ಪ್ರಸಾದ್, ಪಿವಿಸಿ ಇಂಡಸ್ಟ್ರೀಸ್
- ಟಿ. ರಮೇಶ್ ಬಾಬು, ವಿಮಾ ಸಲಹೆಗಾರರು
- ಶಂಭುಲಿಂಗಪ್ಪ ಬಸವನಾಳ್, ಬಸವನಾಳ್ ಇಂಡಸ್ಟ್ರೀಸ್
- ಕೆ. ಮಧ್ವರಾಜ್, ವಿಮಾ ಸಲಹೆಗಾರರು
- ಬಿ.ಎಂ. ಗಾಂಧಿ, ಇಂಜಿನಿಯರ್
- ಎಂ.ಪಿ. ಕುಮಾರಸ್ವಾಮಿ, ನಿವೃತ್ತ ಎಇಇ., ಪಿಡಬ್ಲ್ಯೂಡಿ
- ಬಿ.ಎಂ. ಮಂಜೇಶ್, ವ್ಯವಸಾಯಗಾರರು
- ಪಲ್ಲಾಗಟ್ಟೆ ಮಲ್ಲಿಕಾರ್ಜುನ್, ಪಲ್ಲಾಗಟ್ಟೆ ಟ್ರೇಡರ್ಸ್
- ರಘು ಜೋಶಿ, ಲೆಕ್ಕಪರಿಶೋಧಕರು
- ರಾಜು ಮಾಗೋಡ್, ಮಾಗೋಡ್ ಲೇಸರ್
- ಬಿ.ಎನ್. ವಿಜಯ್‌ಕುಮಾರ್, ಚಾರ್ಟರ್ಡ್ ಅಕೌಂಟೆಂಟ್



# ಯುಗಾದಿ ವರ್ಷ ಭವಿಷ್ಯ

**ದಿನಾಂಕ : 02.04.2022 ರಿಂದ 23.03.2023 ರವರೆಗೆ**



## ಶ್ರೀ ಶುಭಕೃತು ನಾಮ ಸಂವತ್ಸರ

ಸೂರ್ಯ ಸಿದ್ಧಾಂತ ರೀತ್ಯಾ ಭಗವಂತನಾದ ಚತುರ್ಮುಖ ಬ್ರಹ್ಮನ ಪರಮಾಯುಷ್ಯ 100 ವರ್ಷ. ಇದರಲ್ಲಿ ಬ್ರಹ್ಮಮಾನದಿಂದ ಈಗಿರುವ ಚತುರ್ಮುಖ ಬ್ರಹ್ಮನ ಪರಮಾಯುಷ್ಯ ಐವತ್ತು ವರ್ಷ ಕಳೆದಿದ್ದು (ಇದನ್ನು ಪ್ರಥಮ ಪರಾರ್ಧ ಎನ್ನುತ್ತಾರೆ). ಈಗ 51ನೇ ವರ್ಷ ಪ್ರಾರಂಭವಾಗಿದೆ. (ಇದನ್ನು ದ್ವಿತೀಯ ಪರಾರ್ಧ ಎನ್ನುತ್ತಾರೆ). 1ನೇ ತಿಂಗಳು, ಒಂದನೇ ದಿನ, ಸೂರ್ಯೋದಯ ನಂತರ 13 ಘಳಿಗೆ, 42 ವಿಘಳಿಗೆ ಕಳೆದು 43ನೇ ವಿಘಳಿಗೆ ನಡೆಯುತ್ತಿದೆ. ಈಗ ನಡೆಯುತ್ತಿರುವ ಏಳನೇ ವೈವಸ್ವತ ಮನ್ವಂತರದಲ್ಲಿ 28ನೇ ಕಲಿಯುಗವು ನಡೆಯುತ್ತಿದ್ದು, ಕಲಿಯುಗ ಪ್ರಮಾಣ 4,32,000 ವರ್ಷ. ಕಲಿಯುಗ ಆರಂಭವಾಗಿ 5,122, ವರ್ಷ ಕಳೆದು, 5123ನೇ ವರ್ಷದ ಶ್ರೀ ಶುಭಕೃತು ನಾಮ ಸಂವತ್ಸರವನ್ನು ಹೀಗೆ ವಿಶ್ಲೇಷಿಸಬಹುದು.

ಶ್ರೀ ಶುಭಕೃತ್ ನಾಮ ಸಂವತ್ಸರವು, ಶ್ರೀಮನ್ನೃಪ ಶಾಲಿವಾಹನ ಶಕೆ, 1944 ನೇ ಶನಿವಾರದಂದು, ರೇವತಿ ನಕ್ಷತ್ರ, ಐಂದ್ರಯೋಗ, ಕಿಂಸ್ತುಘ್ನ ಕರಣ, ಮಿಥುನ ಲಗ್ನದಲ್ಲಿ ಆರಂಭವಾಗಲಿದ್ದು, ಈ ಸಂವತ್ಸರವನ್ನು ಹೀಗೆ ವಿಶ್ಲೇಷಿಸಬಹುದು.

ಈ ಶುಭಕೃತ್ ನಾಮ ಸಂವತ್ಸರದಲ್ಲಿ ದೇವತಾ ಉತ್ಸವಗಳು ಸ್ಪರ್ಧೆಯ ಮೇಲೆ ನಡೆಯಲಿವೆ. ಜನರು ಅನೇಕ ವಿಧವಾದ ರೋಗ ರುಜಿನಗಳ ಬಾಧೆಗೆ ಒಳಗಾಗಿ ಬಹಳ ಕಷ್ಟಪಡುವರು. ಉತ್ತರ ಭಾರತದ ಕೆಲವೆಡೆ ಅಗ್ನಿ ದುರಂತಗಳು ಉಂಟಾಗಲಿವೆ. ಜಲಾಧಿಪತಿಗಳಾದ ಶುಕ್ರ, ಚಂದ್ರರು, ರವಿ ಬುಧ ಯುತಿಯಲ್ಲಿದ್ದು, ಕುಜ ಶನಿಗಳಿಂದ ನಿರೀಕ್ಷಿತರಾಗಿದ್ದು, ಗುಡುಗು ಸಿಡಿಲುಗಳ ಆರ್ಭಟವೇ ಜೋರಾಗಿರುತ್ತದೆ. ರಾಜ್ಯದ ಎಲ್ಲೆಡೆ ಸುವೃಷ್ಟಿಯಿಂದಾಗಿ ಜಲಾಶಯಗಳು ತುಂಬಿ ಹರಿಯಲಿವೆ. ಆದರೂ ಕೂಡ ಈ ವರ್ಷ ಅನೇಕ ಮಳೆಗಳು ಬುಧವಾರದಂದೇ ಆರಂಭವಾಗಲಿದ್ದು, ಕೆಲವೊಮ್ಮೆ ಸಮಾನ, ಕೆಲವೊಮ್ಮೆ ಸುವೃಷ್ಟಿ ,ಕೆಲವೊಮ್ಮೆ ಸಮಾನ ವೃಷ್ಟಿ, ಕೆಲವೊಮ್ಮೆ ಅತಿವೃಷ್ಟಿಯಿಂದಾಗಿ ತುಪ್ಪ, ಎಣ್ಣೆ, ಎಣ್ಣೆ ಕಾಳುಗಳು ಸಮಪ್ರಮಾಣದಲ್ಲಿ ಮಾರಾಟವಾದರೆ, ಅಕ್ಕಿ, ಗೋಧಿ, ಕಡಲೆ, ಉದ್ದು, ಬೇಳೆ ಕಾಳುಗಳು ದರದಲ್ಲಿ ಸಾಕಷ್ಟು ಏರಿಳಿತಗಳನ್ನು ಕಾಣಲಿವೆ. ದೇಶದ ಉನ್ನತ ನಾಯಕರಿಗೆ, ಚೈತ್ರ ಮಾಸದಿಂದ ಹೆಚ್ಚು ಕಡಿಮೆ ಶ್ರಾವಣ ಮಾಸ ಪರ್ಯಂತ, ನೆರೆರಾಷ್ಟ್ರಗಳೊಂದಿಗೆ ಸೌಹಾರ್ದತೆ ಕಾಪಾಡಿಕೊಳ್ಳುವುದು ತುಸು ಕಷ್ಟವಾಗಲಿದೆ. ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ಸಂಗ್ರಹವಾಗಿ ರಾಷ್ಟ್ರದ ಮತ್ತು ರಾಜ್ಯದ ಬೊಕ್ಕಸ ತುಂಬಲಿದೆ. ವಿದ್ಯಾಕ್ಷೇತ್ರದಲ್ಲಿ ಸಹಜ ಸ್ಥಿತಿ ಮೂಡಲಿದ್ದು, ವಿದ್ಯಾರ್ಥಿಗಳ ಅಧ್ಯಯನ ಸುಗಮವಾಗಲಿದೆ.

### ಶ್ರೀ ಶುಭಕೃತು ಸಂವತ್ಸರಕ್ಕೆ ಸೂರ್ಯಸಿದ್ಧಾಂತ ನವನಾಯಕರು ಮತ್ತು ಫಲಾ-ಫಲಗಳು :

**ರಾಜ-ಶನಿ, ಮಂತ್ರಿ-ಗುರು, ಸೇನಾಧಿಪತಿ-ಬುಧ, ಸಸ್ಯಾಧಿಪತಿ-ರವಿ, ಧಾನ್ಯಾಧಿಪತಿ-ಶುಕ್ರ, ಅರ್ಘಾಧಿಪತಿ-ಬುಧ, ಮೇಘಾಧಿಪತಿ-ಬುಧ, ರಸಾಧಿಪತಿ-ಕುಜ, ನೀರಸಾಧಿಪತಿ-ಶನಿ, ಪಶುನಾಯಕ-ಬಲರಾಮ**

■ **ರಾಜನಾದ ಶನಿರಾಜನ ಫಲ :**

ಈ ಸಂವತ್ಸರಕ್ಕೆ ಶನಿ ರಾಜನಾಗಿರುವುದರಿಂದ ಮಳೆ, ಬೆಳೆಗಳು ಮಧ್ಯಮಸ್ಥರದಲ್ಲಿದ್ದು, ಮಳೆಯು ಚಂಚಲತೆಯಿಂದ ಕೂಡಿದ್ದು, ಅನಿಶ್ಚಿತತೆ ಕಂಡುಬರಲಿದೆ ಅಥವಾ ಅಕಾಲದಲ್ಲಿ ಸುರಿಯಲಿದೆ. ಕಳ್ಳಕಾಕರ ಕಾಟ ಹೆಚ್ಚಲಿದೆ. ಜನರು ಸುಲಭ ಮಾರ್ಗದಲ್ಲಿ ಹಣ ಸಂಪಾದಿಸಲು ಯತ್ನಿಸುವರು. ಸುಳ್ಳು ತಟವಟ ಹೆಚ್ಚುವುದು. ರೋಗಬಾಧೆಯಿಂದ ಬಳಲುವರು. ರಾಜ ಕೋಪ ವಿಪರೀತವಾಗಲಿದೆ. ಆದರೆ, ದವಸ ಧಾನ್ಯಗಳ ವ್ಯಾಪಾರ ಚೆನ್ನಾಗಿ ನಡೆಯಲಿದೆ.

■ **ಮಂತ್ರಿಯಾದ ಗುರುವಿನ ಫಲ :**

ಗುರುವು ಈ ಸಂವತ್ಸರದಲ್ಲಿ ಮಂತ್ರಿಯಾಗಿರುವುದರಿಂದ ಸುವೃಷ್ಟಿಯಿಂದಾಗಿ ವಾಣಿಜ್ಯ ಬೆಳೆಗಳು ಹೇರಳವಾಗಿ ಬೆಳೆಯಲಿವೆ. ಅತಿವೃಷ್ಟಿಯಿಂದಾಗಿ ಕೆಲವು ಪ್ರದೇಶಗಳು ಜಲಾವೃತವಾಗಲಿವೆ. ನೆರೆ ದೇಶಗಳಿಂದ ಬೆದರಿಕೆ ತಂತ್ರ ಉಂಟಾದರೂ, ಯುದ್ಧದ ಭಯವಿಲ್ಲ. ಮಂತ್ರಿಮಹೋದಯರು ಐಶ್ವರ್ಯವಂತರಾಗಿ, ಯಜ್ಞ ಯಾಗಾದಿಗಳಲ್ಲಿ ವಿಶೇಷವಾಗಿ ಭಾಗವಹಿಸುವರು.

■ **ಸೇನಾಧಿಪತಿಯಾದ ಬುಧನ ಫಲ :**

ಬುಧನು ಸೇನಾಧಿಪತಿಯಾಗಿರುವುದರಿಂದ ಮೋಡಗಳು ಚದುರಿ ದಂತಿದ್ದು, ಮಳೆಯು ಕಣ್ಣಾಮುಚ್ಚಾಲೆಯಾಡಲಿದೆ. ಆದರೂ, ಉತ್ತಮ ಬೆಳೆಗಳಿಗೆ ತೊಂದರೆಯಿಲ್ಲ. ಕೆಲವು ಪ್ರದೇಶಗಳಲ್ಲಿ ಮಧ್ಯಮ ರೀತಿಯ ಮಳೆಯಿಂದಾಗಿ ಬೆಳೆ ಕೂಡ ಮಧ್ಯಮ ಸ್ತರದಲ್ಲಿ ಬರಲಿದೆ. ಪ್ರಜೆಗಳು ಕಲೆ ಮೊದಲಾದವುಗಳಲ್ಲಿ ಹೆಚ್ಚು ಆಸಕ್ತರಾಗಿ, ಅದಕ್ಕಾಗಿ ಹೆಚ್ಚಿನ ಧನವ್ಯಯ ಮಾಡುವರು.

■ **ಸಸ್ಯಾಧಿಪತಿಯಾದ ರವಿಯ ಫಲ :**

ರವಿಯು ಸಸ್ಯಾಧಿಪತಿಯಾಗಿದ್ದು, ಈತಿರೋಗ ಬಾಧೆಗಳು ಹೆಚ್ಚಲಿವೆ. ಹುರುಳಿ, ತೊಗರಿ, ಕಡಲೆ ಮುಂತಾದವುಗಳು ಚೆನ್ನಾಗಿ ಬೆಳೆಯಲಿವೆ. ಆದರೆ ಉದ್ದು, ಹೆಸರು, ಜೇನು ಮುಂತಾದವುಗಳು ಮಧ್ಯಮ ಸ್ತರದಲ್ಲಿ ಬೆಳೆಯುವುದು. ಪ್ರಜೆಗಳಿಗೆ ಸದಾಕಾಲ ರಾಜರ ಮತ್ತು ಕಳ್ಳಕಾಕರ ಭಯ ತಪ್ಪಿದ್ದಲ್ಲ.

■ **ಧಾನ್ಯಾಧಿಪತಿಯಾದ ಶುಕ್ರನ ಫಲ :**

ಬರಗಾಲವಿರುವ ಪ್ರದೇಶಗಳಲ್ಲಿ ಮಳೆ ಸಮೃದ್ಧಿಯಾಗಲಿದೆ. ಮಾವು ಮೊದಲಾದ ವೃಕ್ಷಗಳು ಉತ್ತಮ ಫಸಲು ಕೊಡಲಿವೆ. ಜನರು ರೋಗ-ರುಜಿನಗಳಿಂದ ಮುಕ್ತರಾಗಿ, ಆರೋಗ್ಯವಂತರಾಗಿರುವರು. ಎಳ್ಳು, ಸಾಸಿವೆ, ರಾಗಿ ಮೊದಲಾದವುಗಳ ಪೀಕು ಉತ್ತವಾಗಿರಲಿವೆ.

■ **ಅರ್ಘ್ಯಾಧಿಪತಿ ಬುಧನ ಫಲ :**

ಬುಧನೇ ಮೇಘಾಧಿಪತಿಯಾಗಿರುವುದರಿಂದ ದೇಶದ ಮಧ್ಯ ಭಾಗದಲ್ಲಿ ಗುಡುಗು, ಮಿಂಚುಗಳಿಂದ ಆಲಿಕಲ್ಲುಗಳ ಆರ್ಭಟ ಹೆಚ್ಚಾಗಲಿದೆ. ಇದರಿಂದಾಗಿ ಆ ಭಾಗದಲ್ಲಿ ಅತಿವೃಷ್ಟಿಯಾಗುವುದು. ಬೆಳೆಗಳ ನಾಶದಿಂದ ರೈತರು ಕಂಗಾಲಾಗುವರು. ಇದರ ಜೊತೆಗೆ ಸುಂಟರಗಾಳಿಯ ಕಾಟವನ್ನು ಸಹಿಸಿಕೊಳ್ಳುವುದು ಅನಿವಾರ್ಯವಾಗಲಿದೆ.

■ **ಮೇಘಾಧಿಪತಿ ಬುಧನ ಫಲ :**

ಮೇಘಾಧಿಪತಿ ಕುಜನಾಗಿರುವುದರಿಂದ, ಮಳೆ ಕಡಿಮೆಯಾದೂ, ಹೆಚ್ಚು ಧಾನ್ಯ ಬೆಳೆಯಲಿದೆ ಮತ್ತು ಪದಾರ್ಥಗಳ ಬೆಲೆ ಗಗನಮುಖಿಯಾಗಲಿದೆ.ಕೆಲವು ಕಡೆ ಸುವೃಷ್ಟಿಯಾಗಿ ಪಶುಗಳಿಗೆ ಸಾಕಷ್ಟು ಮೇವು ಸಿಗುವುದು. ಹೈನೋದ್ಯಮದಲ್ಲಿ ಹೆಚ್ಚಿನ ಪ್ರಗತಿ ಕಂಡುಬರುವುದು. ಜಲಸಸ್ಯಗಳು ಸಮೃದ್ಧಿಯಾಗುವವು. ಜನರ ಆರೋಗ್ಯದಲ್ಲಿ ಸಾಕಷ್ಟುಸುಧಾರಣೆ ಕಂಡುಬರುವುದು. ರಾಷ್ಟ್ರ ರಾಜಕಾರಣದಲ್ಲಿ. ಅನೇಕ ಗೊಂದಲಗಳು ಕಂಡುಬರುವವು, ರಾಜ ಕಾರಣಿಗಳ ಪರಸ್ಪರ ನಿಂದನೆಯಿಂದಾಗಿ ಪ್ರಜೆಗಳ ವಿಶ್ವಾಸ ಕಳೆದು ಕೊಳ್ಳುವರು. ಭೂ ಸಂಬಂಧಿ ವ್ಯವಹಾರಗಳು ನಿರಾತಂಕವಾಗಿ ನಡೆಯಲಿವೆ.

■ **ರಸಾಧಿಪತಿಯಾದ ಕುಜನ ಫಲ :**

ಬೆಳ್ಳಿ, ಉಪ್ಪು, ತುಪ್ಪ, ಎಳ್ಳು, ಎಣ್ಣೆ, ಬೆಲ್ಲ, ಮೊದಲಾದ ರಸ ಪದಾರ್ಥಗಳ, ಸಮೃದ್ಧಿಯಿಂದಾಗಿ ಸಾಕಷ್ಟು ಲಭ್ಯವಿರಲಿದೆ. ಗ್ರಾಮೀಣ ಪ್ರದೇಶಗಳಲ್ಲಿ, ಅನಿರೀಕ್ಷಿತವಾಗಿ ಬೆಂಕಿ ಮೊದಲಾದ ಅನಾಹುತವಾಗಲಿದೆ. ಗ್ರಾಮದ ಹಿರಿಯರಿಗೆ ಅನಾರೋಗ್ಯ ಕಾಣಲಿದೆ. ಹೈನುಗಾರಿಕೆ ಹೆಚ್ಚು ಲಾಭವಾಗಲಿದೆ. ಜನರು ನೆಮ್ಮದಿಯಿಂದ ಇರುವರು.

■ **ನೀರಸಾಧಿಪತಿ ಶನಿರಾಜನ ಫಲ :**

ಧಾತುಗಳಾದ ಚಿನ್ನ, ಮುತ್ತು, ಶ್ರೀಗಂಧ, ಕರ್ಪೂರ, ಬೆಳ್ಳಿ, ಇವುಗಳ ಬೆಲೆ ಗಗನಮುಖಿಯಾಗಲಿದೆ ಮತ್ತು ಕಬ್ಬಿಣ, ಸೀಸ, ತಾಮ್ರ ಮೊದಲಾದವುಗಳು ಸಾಕಷ್ಟು ಸಿಗಲಿದೆ. ನೀಲಮಣಿ, ಹವಳ, ಇವುಗಳು ಮಧ್ಯಸ್ತರದಲ್ಲಿ, ಏರಿಳಿತವಾಗಲಿವೆ. ಸುಗಂಧ ದ್ರವ್ಯಗಳು ಹೇರಳವಾಗಿ ಸಿಗಲಿವೆ.

■ **ಪಶುಪಾಲಕ ಬಲರಾಮನ ಫಲ :**

ಸುವೃಷ್ಟಿಯಿಂದಾಗಿ, ಸಸ್ಯ ಸಮೃದ್ಧಿಯಿಂದಾಗಿ ಪಶುಗಳಿಗೆ ಹೇರಳವಾಗಿ ಮೇವು ಸಿಗಲಿದೆ. ಅನೇಕ ರೋಗಗಳಿಂದ ಮುಕ್ತರಾಗಲಿವೆ. ಸಾಕಷ್ಟು ಹಾಲು, ಮೊಸರು, ತುಪ್ಪ ದೇಶದ ಮಧ್ಯಭಾಗದಲ್ಲಿ ಬೆಳೆ ಸಾಕಷ್ಟು ಆಗಲಿದೆ. ಮಳೆಯೂ ಚೆನ್ನಾಗಿಯೇ ಆಗಲಿದೆ.

| | ಅಶ್ವಿನಿ | ಭರಣಿ | ಕೃತ್ತಿಕಾ | ರೋಹಿಣಿ | ಮೃಗಶಿರಾ | ಆರಿದ್ರಾ | ಪುನರ್ವಸು | ಪುಷ್ಯ | ಆಶ್ಲೇಷಾ | ಮಖಾ | ಪುಬ್ಬಾ | ಉತ್ತರಾ | ಹಸ್ತಾ | ಚಿತ್ತಾ | ಸ್ವಾತಿ | ವಿಶಾಖ | ಅನುರಾಧ | ಜ್ಯೇಷ್ಠ | ಮೂಲ | ಪೂರ್ವಾಷಾಢ | ಉ.ಷಾಢ | ಶ್ರವಣ | ಧನಿಷ್ಠಾ | ಶತಭಿಷಾ | ಪೂ.ಭಾದ್ರ | ಉ.ಭಾದ್ರ | ರೇವತಿ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| ಪ್ರಥಮ | 5 | 0 | 3 | 6 | 1 | 4 | 7 | 2 | 5 | 0 | 3 | 6 | 1 | 4 | 7 | 2 | 5 | 0 | 3 | 6 | 1 | 4 | 7 | 2 | 5 | 0 | 3 |
| ದ್ವಿತೀಯ | 0 | 1 | 2 | 0 | 1 | 2 | 0 | 1 | 2 | 0 | 1 | 2 | 0 | 1 | 2 | 0 | 1 | 2 | 0 | 1 | 2 | 0 | 1 | 2 | 0 | 1 | 2 |
| ತೃತೀಯ | 4 | 2 | 0 | 3 | 1 | 4 | 2 | 0 | 3 | 1 | 4 | 2 | 0 | 3 | 1 | 4 | 2 | 0 | 3 | 1 | 4 | 2 | 0 | 3 | 1 | 4 | 2 |

### ದ್ವಾದಶ ರಾಶಿಗಳ ಆಯ-ವ್ಯಯ

| ರಾಶಿ | ಆಯ | ವ್ಯಯ | ಆರೋಗ್ಯ | ಅನಾರೋಗ್ಯ | ರಾಜ ಪೂಜಾ | ರಾಜ ಕೋಪ | ಸುಖ | ದುಃಖ |
|---|---|---|---|---|---|---|---|---|
| ಮೇಷ-ವೃಶ್ಚಿಕ | 14 | 14 | 1 | 6 | 5 | 6 | 3 | 3 |
| ವೃಷಭ-ತುಲಾ | 8 | 8 | 5 | 0 | 0 | 5 | 6 | 3 |
| ಮಿಥುನ-ಕನ್ಯಾ | 11 | 5 | 0 | 4 | 4 | 2 | 6 | 3 |
| ಕರ್ಕಾಟಕ | 11 | 11 | 4 | 4 | 2 | 6 | 3 | 3 |
| ಸಿಂಹ | 8 | 14 | 2 | 3 | 5 | 6 | 3 | 3 |
| ಧನಸ್ಸು-ಮೀನ | 2 | 8 | 6 | 4 | 4 | 2 | 6 | 3 |
| ಮಕರ-ಕುಂಭ | 5 | 2 | 0 | 2 | 1 | 2 | 6 | 3 |

### ಕಂದಾಯ ಫಲ :

ಕಂದಾಯದ ಸಂಖ್ಯೆ ಹೆಚ್ಚಿದಷ್ಟೂ ಫಲ ಹೆಚ್ಚು. ಬೆಸವಾದರೆ ದ್ರವ್ಯಲಾಭ. ಸಮವಾದರೆ ಮಧ್ಯಮ ಲಾಭ.ಸೊನ್ನೆಯಾದರೆ ನಿಷ್ಫಲ. ಮೊದಲನೇ ಕಂದಾಯವು ಸೊನ್ನೆಯಾದರೆ ರೋಗಭಯ.ಎರಡನೇ ಕಂದಾಯವು ಸೊನ್ನೆಯಾದರೆ ಮಹಾಭಯ.ಮೂರನೇ ಕಂದಾಯ ಸೊನ್ನೆಯಾದರೆ ಧನಹಾನಿ. ಮೂರೂ ಕಂದಾಯಗಳು ಸೊನ್ನೆಯಾದರೆ ಮಹಾಕಷ್ಟ.

### ಪ್ರಥಮ ಕಂದಾಯ :

ಚೈತ್ರ, ವೈಶಾಖ, ಜ್ಯೇಷ್ಠ, ಆಷಾಢ ಮಾಸಗಳು.

ದ್ವಿತೀಯ ಕಂದಾಯ :- ಶ್ರಾವಣ, ಭಾದ್ರಪದ, ಆಶ್ವಯುಜ, ಕಾರ್ತಿಕ ಮಾಸಗಳು

ತೃತೀಯ ಕಂದಾಯ :- ಮಾರ್ಗಶಿರ, ಪುಷ್ಯ,ಮಾಘ, ಫಾಲ್ಗುಣ ಮಾಸಗಳು.

### ಮೇಘ ವಿಚಾರ :

ಈ ಶುಭಕೃತ್ ನಾಮ ಸಂವತ್ಸರದಲ್ಲಿ, ವಾಯುನಾಯಕ ಮೇಘವು ಮೇರು ಪರ್ವತದ ವಾಯುವ್ಯ ದಿಕ್ಕಿನಲ್ಲಿ ಹುಟ್ಟಿ, ಗಾಳಿಯಿಂದ ಕೂಡಿ, ಹೆಚ್ಚಿನ ಮಳೆಯನ್ನು ಸುರಿಸುತ್ತದೆ. ಮಳೆ 1 ಕೊಳಗ,ಗಾಳಿ 2 ಕೊಳಗ, ಒಂದು ಕೊಳಗವು ಸುಮಾರು 60 ಗಾವುದ ವಿಸ್ತೀರ್ಣವುಳ್ಳದ್ದಾಗಿರುತ್ತದೆ ಮತ್ತು 100 ಗಾವು ಎತ್ತರವುಳ್ಳದ್ದಾಗಿರುತ್ತದೆ. ಮಳೆಯ ಒಟ್ಟು 20 ಭಾಗದಲ್ಲಿ, 10 ಭಾಗ ಸಮುದ್ರದಲ್ಲೂ. 6 ಭಾಗ ಪರ್ವತದಲ್ಲೂ,4 ಭಾಗ ಭೂಮಿಯ ಮೇಲೆ ಬೀಳುತ್ತದೆ.



**ಚಂದ್ರ ದರ್ಶನ : 02.04.2022ನೇ ಶನಿವಾರ ಸಾಯಂಕಾಲ 6.50ಕ್ಕೆ ಚಂದ್ರ ದರ್ಶನವಾಗುವುದು.**

**ಸಂಭವಿಸುವ ಗ್ರಹಣಗಳು : ಈ ವರ್ಷ ಸಂಭವಿಸಬಹುದಾದ ಗ್ರಹಣಗಳ ಬಗ್ಗೆ ಮುಂದೆ ತಿಳಿಸಲಾಗುವುದು.**

#### ಮೇಷ ರಾಶಿ

ಗುರುಗ್ರಹವು ಶುಭದಾಯಕವಾಗಿದ್ದು, ನಂತರದಲ್ಲಿ ವ್ಯಯ ಸ್ಥಾನದಲ್ಲಿ ಅಂದರೆ ಮೀನ ರಾಶಿಯಲ್ಲಿ ಗುರುವಿನ ಸಂಚಾರ ಪ್ರಾರಂಭವಾಗುವುದರಿಂದ ನೀವು ಎಷ್ಟೇ ನ್ಯಾಯ ಮಾರ್ಗದಲ್ಲಿ ನಡೆದರೂ ಪ್ರತಿಕೂಲವಾಗಿಯೇ ಫಲ ನೀಡಲಿದೆ. ಹಮ್ಮಿಕೊಂಡ ಕೆಲಸಗಳಲ್ಲಿ ವಿಳಂಬ, ಹಿರಿಯರೊಂದಿಗೆ ವಾಗ್ವಾದ, ಬಂಧುಗಳೊಡನೆ ವಿರೋಧ. ಆತ್ಮೀಯರಾದ ಗೆಳೆಯರ ನೆರವಿನಿಂದ ಆರ್ಥಿಕ ನೆರವು, ಸರ್ಕಾರದಿಂದ ಆಗಬೇಕಾಗಿರುವ ಕೆಲಸಗಳು ಕೈತಪ್ಪುವ ಸಂಭವವಿದೆ. ಉದ್ಯೋಗದಲ್ಲಿ ಕಿರುಕುಳ, ಕುಟುಂಬ ಕಲಹ, ವರ್ಷದ ಮಧ್ಯದಲ್ಲಿ ವಕ್ರೀ ಶನಿಯ ನಡೆಯಿಂದಾಗಿ ಉದ್ಯಮದಲ್ಲಿ ಹೆಚ್ಚಿನ ಆದಾಯ, ಶತ್ರುಗಳಿಂದ ಉಂಟಾಗಬಹುದಾದ ಸಮಸ್ಯೆಗಳನ್ನು ಯಾವುದೇ ಕಾರಣಕ್ಕೂ ಉಪೇಕ್ಷಿಸಬೇಡಿ. ಖಾಸಗಿ ಕಂಪನಿ ನೌಕರರಿಗೆ ಅನಿರೀಕ್ಷಿತವಾಗಿ ಸ್ಥಳ ಬದಲಾವಣೆ, ಯಾವುದೇ ಕಾರಣಕ್ಕೂ ಆರೋಗ್ಯವನ್ನು ಅಲಕ್ಷಿಸಬೇಡಿ. ನ್ಯಾಯಾಲಯದ ವ್ಯಾಜ್ಯಗಳು ನಿಮ್ಮಂತೆಯಾಗಲಿವೆ. ಕೈಗಾರಿಕೋದ್ಯಮಿಗಳು ಅವಕಾಶಗಳನ್ನು ಕೈಜಾರದಂತೆ ನೋಡಿಕೊಳ್ಳಿ, ರಾಜಕಾರಣಿಗಳಿಗೆ ವರ್ಷಾಂತ್ಯದಲ್ಲಿ ಉತ್ತಮ ದಿನಗಳು, ಕೃಷಿಕರಿಗೆ ಉತ್ತಮ ಫಸಲು, ಕೆಲವು ವಿಷಯಗಳಲ್ಲಿ ವೃಥಾ ತಿರುಗಾಟ, ಸಂತಾನ ಭಾಗ್ಯ ಸಾಧ್ಯವಾದಷ್ಟು ಶನಿ ಜಪ, ಗುರು ಜಪ ಮಾಡುವುದು ಲೇಸು. ಸಮಯ ಸಿಕ್ಕಾಗ ವಿಷ್ಣು ಸಹಸ್ರನಾಮ ಪಠಿಸಿ. ಸಾಧ್ಯವಿದ್ದಲ್ಲಿ ಅನ್ನದಾನ ಮಾಡಿ.

#### ವೃಷಭ ರಾಶಿ

ಕಳೆದ ವರ್ಷವೆಲ್ಲಾ ಬರೀ ಕಷ್ಟಗಳನ್ನೇ ಹಾಸಿ ಹೊದ್ದಿದ್ದ ನಿಮಗೆ, ಗುರುವು ಲಾಭ ಸ್ಥಾನದಲ್ಲಿ ಬರಲಿದ್ದು, ಕೆಲಸ ಕಾರ್ಯಗಳಲ್ಲಿ ಯಶಸ್ಸು, ಆರಂಭಿಸಿರುವ ಉದ್ಯಮದಲ್ಲಿ ಹೆಚ್ಚಿನ ಲಾಭ, ನವದಂಪತಿಗಳಿಗೆ ಸಂತಾನ ಫಲ, ಹಳೆ ಕಾಯಿಲೆಗಳು ಸುಧಾರಿಸಲಿವೆ. ಮಂಗಳ ಕಾರ್ಯಗಳು ನಿರ್ವಿಘ್ನವಾಗಿ ನೆರವೇರಲಿವೆ. ಸಮಾಜದಲ್ಲಿ ಸ್ಥಾನಮಾನಗಳು ಹೆಚ್ಚಲಿದ್ದು, ಸನ್ಮಾನಗಳು ನೆರವೇರಲಿವೆ. ಸಂವತ್ಸರದ ಮಧ್ಯದಲ್ಲಿ ಶನಿಗ್ರಹದ ವಕ್ರೀಗತಿಯಿಂದಾಗಿ ಮನಸ್ಸಿಗೆ ವೃಥಾ ಆತಂಕ, ಭಯ, ಜೊತೆಗೆ ಇಲ್ಲಸಲ್ಲದ ಆಪಾದನೆಗಳು, ಹಿರಿಯರೊಬ್ಬರ ಅಗಲಿಕೆ ತೀವ್ರ ದುಃಖವನ್ನುಂಟುಮಾಡಲಿದೆ. ಆಚಾರ-ವಿಚಾರಗಳಲ್ಲಿ ನಿರಾಸಕ್ತಿ, ಹೃದಯಸಂಬಂಧಿ ಅನಾರೋಗ್ಯ, ಅನಾವಶ್ಯಕ ಓಡಾಟ, ಕೂಡಿಟ್ಟ ಹಣದ ವ್ಯಯ, ಅನಿವಾರ್ಯವಾಗಿ ಸಾಲ, ವರ್ಷ್ಯಾಂತ್ಯದಲ್ಲಿ ಉತ್ತಮ ಫಲಗಳು, ಆರಂಭಿಸಿರುವ ಹೊಸ ಉದ್ಯಮವು ಲಾಭದತ್ತ ಸಾಗಲಿದೆ. ವಸ್ತ್ರಾಭರಣಗಳ ಖರೀದಿ, ದಂಪತಿಗಳಲ್ಲಿ ಮೂಡಿದ್ದ ಭಿನ್ನಾಭಿಪ್ರಾಯ ದೂರ, ವಾಹನಗಳನ್ನು ಕೊಳ್ಳುವ ಯೋಗ ಬರಲಿದೆ. ಸರ್ಕಾರದ ಕೆಲಸಗಳಲ್ಲಿ ಪ್ರಯತ್ನ, ಅಲ್ಪ ಫಲ. ವಿದ್ಯಾರ್ಥಿಗಳಿಗೆ ಹೆಚ್ಚಿನ ಶ್ರಮಪಡದೇ ವಿಧಿಯಿಲ್ಲ. ದೂರ ಪ್ರಯಾಣದಿಂದ ದೇಹದಲ್ಲಿ ಆಯಾಸ, ಸರ್ಕಾರಿ ನೌಕರರು ಅಡ್ಡದಾರಿಯಲ್ಲಿ ಸಂಪಾದನೆಗೆ ಯತ್ನಿಸಿದಲ್ಲಿ ಸಂಕಷ್ಟ ತಪ್ಪಿದ್ದಲ್ಲ. ಆಸ್ತಿ ವಿಭಾಗದ ವಿಷಯದಲ್ಲಿ ಮಧ್ಯಸ್ಥರ ಸಲಹೆಯಂತೆ ನಡೆಯುವುದು ಮೇಲು.

#### ಮಿಥುನ ರಾಶಿ

ಗುರು ಗ್ರಹವು ಏಪ್ರಿಲ್‌ವರೆಗೆ ಅಶುಭದಾಯಕನಾಗಿದ್ದು, ನಂತರ ಶುಭದಾಯಕ ನಾಗುವನು, ಅಸಾಧ್ಯವೆಂಬ ಕಾರ್ಯಗಳು ಸಾಧಾರಣ ಮಟ್ಟದಲ್ಲಿ ನೆರವೇರಲಿವೆ. ಮನೆಯಲ್ಲಿ ಮಂಗಳ ಕಾರ್ಯಗಳು ನೆರವೇರಲಿವೆ, ವೃತ್ತಿಯಲ್ಲಿ ಸ್ಥಳ ಬದಲಾವಣೆ, ಕಛೇರಿ ಕೆಲಸವೆಂದು ವಿಪರೀತ ತಿರುಗಾಟ, ಶನಿಗ್ರಹದ ವಕ್ರೀ ಸಂಚಾರದಿಂದಾಗಿ ವರ್ಷಪೂರ್ತಿ ಅಶುಭದಾಯಕನಾಗಿಯೇ ಇರುವನು, ಇದರ ಫಲವಾಗಿ, ಅನಿರೀಕ್ಷಿತವಾಗಿ ವಾಸ ಸ್ಥಳದಿಂದ ದೂರವಿರುವುದು, ಮಡದಿ-ಮಕ್ಕಳಿಗೆ ಕಷ್ಟ. ಸಾಧ್ಯ ವಾದಷ್ಟು ಅನುಭವಿಗಳಾದ ಹಿರಿಯರ ಸಲಹೆಯಂತೆ ನಡೆದುಕೊಳ್ಳಿ. ಆದಾಯ ಹೆಚ್ಚಿದ್ದರೂ ಅದಕ್ಕೆ ತಕ್ಕಂತೆ ಖರ್ಚು, ಆತುರದ ವಾಹನ ಚಾಲನೆಯಿಂದಾಗಿ ಸಣ್ಣಪುಟ್ಟ ಅಪಘಾತಗಳು, ವರ್ಷದ ಮಧ್ಯದಲ್ಲಿ ಆಕಸ್ಮಿಕ ಧನಲಾಭ, ಆರ್ಥಿಕ ಸಂಕಷ್ಟಗಳು ದೂರವಾಗಲಿವೆ. ಕಲಾವಿದರಿಗೆ ಉತ್ತಮ ಅವಕಾಶಗಳು, ಕುಲದೇವತಾ ದರ್ಶನ ಭಾಗ್ಯ, ನಿರುದ್ಯೋಗಿ ಪದವೀಧರರು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ವಿ, ಅವಿವಾಹಿತರಿಗೆ ಕಂಕಣ ಭಾಗ್ಯ, ಹಿರಿಯರ ಅಗಲಿಕೆ ಅನಿವಾರ್ಯವಾಗಲಿದೆ. ಕೈಗಾರಿ ಕೋದ್ಯಮಿಗಳಿಗೆ ಕಾರ್ಮಿಕರ ಸಮಸ್ಯೆ, ಮಗನಿಗೆ ನೌಕರಿ, ಭೂ ಸಂಬಂಧಿ ವ್ಯವಹಾರ ದಲ್ಲಿ ತಕರಾರುಗಳು ಎದುರಾಗಬಹುದು. ಮಡದಿ ಆರೋಗ್ಯದ ಕಡೆ ಗಮನವಿರಲಿ, ಸಾಧ್ಯವಾದಷ್ಟು ಗುರು ಚರಿತ್ರೆಯನ್ನು ಪಾರಾಯಣ ಮಾಡಿ. ಗುರು ಜಪ ಮಾಡಿ.

#### ಕರ್ಕಾಟಕ ರಾಶಿ

ಸದಾ ಕ್ರಿಯಾಶೀಲರಾದ ನಿಮಗೆ ಈ ವರ್ಷಪೂರ್ತಿ ಶನಿ ಗ್ರಹವು ಅಶುಭ ದಾಯಕ, ಏಪ್ರಿಲ್ ತಿಂಗಳ ನಂತರ ಗುರುಗ್ರಹವು ಶುಭ ಸ್ಥಾನಕ್ಕೆ ಬರಲಿದ್ದು, ನಂತರ ವರ್ಷವಿಡೀ ಶುಭ ಫಲವನ್ನೇ ಕೊಡುವನು. ಆರಂಭದಲ್ಲಿ ಶನಿಯು ವ್ಯವಹಾರದಲ್ಲಿ ಪಾಲುದಾರರೊಂದಿಗೆ ಭಿನ್ನಾಭಿಪ್ರಾಯ, ಪತಿ-ಪತ್ನಿಯರಲ್ಲಿ ವೃಥಾ ವಿರಸ, ತಪ್ಪು ಗ್ರಹಿಕೆ, ಜೊತೆಗೆ ಪ್ರಯತ್ನಪೂರ್ವಕವಾಗಿ ಮಾಡಿದ ಕೆಲಸಗಳೆಲ್ಲವೂ ಹಾನಿಯಾಗಲಿವೆ. ಸ್ನೇಹಿತರು, ಬಂಧು-ಬಳಗದೊಂದಿಗೆ ನಿಷ್ಠೂರ ಕಟ್ಟಿಕೊಳ್ಳಬೇಕಾಗಬಹುದು. ಕುಟುಂಬದಲ್ಲಿ ಕಂಡುಬರುವ ಅನಾರೋಗ್ಯ ಸಮಸ್ಯೆ ಹೆಚ್ಚಿನ ವೈದ್ಯಕೀಯ ವೆಚ್ಚಕ್ಕೆ ದಾರಿ, ಮಾನಸಿಕ ನೆಮ್ಮದಿಯನ್ನು ಅರಸಿ ವೃಥಾ ತಿರುಗಾಟ, ಜೊತೆಗೆ ಸಹೋದ್ಯೋಗಿ ಮಿತ್ರರಿಂದ ಅಸಹಕಾರ ಇತ್ಯಾದಿ ಅಶುಭ ಫಲಗಳು ಕಂಡುಬಂದರೂ ಚಿಂತಿಸಬೇಕಿಲ್ಲ. ಮುಂದೆ ಭಾಗ್ಯಸ್ಥಾನಕ್ಕೆ ಬರಲಿರುವ ಗುರುವಿನಿಂದಾಗಿ ಉತ್ತಮ ಫಲಗಳನ್ನು ಕಾಣುವಿರಿ. ಯಾವುದೇ ಆತಂಕಗಳಿದ್ದರೂ, ನಡೆಯಬೇಕಾಗಿರುವ ಮಂಗಳ ಕಾರ್ಯ ಗಳು ನಿರಾತಂಕವಾಗಿ ನಡೆಯಲಿವೆ. ಬರಬೇಕಾಗಿರುವ ಬಾಕಿ ಹಣ ವಸೂಲಾಗಲಿದೆ. ಸರ್ಕಾರದಿಂದ ಆಗಬೇಕಾಗಿರುವ ಕೆಲಸಗಳು, ಪ್ರಭಾವೀ ರಾಜಕಾರಣಿಗಳೊಬ್ಬರ ಪ್ರಭಾವದಿಂದ ಕೂಡಲೇ ನೆರವೇರಲಿವೆ.ಗೊಂದಲಮಯ ವಾಗಿದ್ದ ಆಸ್ತಿ ವಿಭಾಗ ಬಗೆಹರಿದು ಬಾಂಧವ್ಯ ವೃದ್ಧಿಸಲಿದೆ. ಹಳೆಯ ಮಿತ್ರರ ಭೇಟಿ, ಕೌಟುಂಬಿಕ ಹಗರಣ ಗಳಿಗೆ ಪರಿಹಾರ. ವಿದ್ಯಾರ್ಥಿಗಳು ಅನಿರೀಕ್ಷಿತ ಸನ್ನಿವೇಶ ವೊಂದರ ಕೈಗೊಂಬೆಯಾಗಿ, ದುಶ್ಚಟಗಳ ದಾಸರಾಗುವ ಸಂಭವಿದೆ. ಅವಿವಾಹಿತರಿಗೆ ಕಂಕಣಭಾಗ್ಯ, ಅಮೂಲ್ಯ ವಸ್ತುಗಳು ಕಳೆದು ಹೋಗುವ ಅಥವಾ ಕಳ್ಳತನವಾಗುವ ಸನ್ನಿವೇಶ ಎದುರಾಗಲಿದೆ.

#### ಸಿಂಹ ರಾಶಿ

ಆರಂಭದಲ್ಲಿ ಶನಿ-ಗುರು ಗ್ರಹಗಳು ಶುಭದಾಯಕವಾಗಿದ್ದರೂ, ಮಧ್ಯಂತರದಲ್ಲಿ ಅಶುಭ ಸ್ಥಾನದಲ್ಲಿರುವುದರಿಂದ ಶುಭಾಶುಭಗಳ ಮಿಶ್ರಫಲ ಕಾಣುವಿರಿ. ಸಣ್ಣ ಕೆಲಸಕ್ಕೂ ಹೆಚ್ಚಿನ ಶ್ರಮ. ಮನೆಯಲ್ಲಿ ಧನಧಾನ್ಯಗಳ ಸಮೃದ್ಧಿ ಕಂಡುಬಂದರೂ, ನೆಮ್ಮದಿ ಕಡಿಮೆ, ಎಷ್ಟೇ ಕಷ್ಟಬಂದರೂ ಭೋಗಜೀವನ ಅರಸುವ ನಿಮಗೆ ಮುಂದೆ ಭ್ರಮನಿರಸನವಾಗಲಿದೆ. ಶಾರೀರಕ ವ್ಯಾಧಿಗಳಿಂದ ಆಸ್ಪತ್ರೆಗೆ ಅಲೆದಾಟ ತಪ್ಪುವುದಿಲ್ಲ. ಶುಭ ಕಾರ್ಯದ ಪ್ರಯಾಣಗಳಿಗೆ ಅನೇಕ ಅಡ್ಡಿ-ಆತಂಕಗಳು ಎದುರಾಗಲಿವೆ. ಇಲ್ಲ ಸಲ್ಲದ ಸಮಸ್ಯೆಗಳನ್ನು ನೀವಾಗಿಯೇ ಮೈ ಮೇಲೆ ಎಳೆದುಕೊಳ್ಳುವಿರಿ. ವರ್ಷದ ಮಧ್ಯದಲ್ಲಿ ಸಾಧಾರಣ ಎನ್ನಬಹುದಾದ ಶುಭ ಫಲಗಳು ಕಾಣಲಿವೆ. ವಿವಿಧ ಮೂಲಗಳಿಂದ ಆರ್ಥಿಕ ನೆರವು, ಮಹಿಳಾ ಉದ್ಯೋಗಿಗಳಿಗೆ ಪದೋನ್ನತಿಯೊಂದಿಗೆ ವೇತನದಲ್ಲಿ ಹೆಚ್ಚಳ, ನಿವೇಶನ ಖರೀದಿ ವಿಚಾರಕ್ಕೆ ನೆರವು, ಕ್ರೀಡಾಪಟುಗಳಿಗೆ ಅತ್ಯುತ್ತಮ ಅವಕಾಶಗಳು, ಅಗ್ನಿ ಅಪಘಾತಕ್ಕೆ ಮುಂಜಾಗ್ರತೆ ವಹಿಸಿ, ವರ್ಷಾಂತ್ಯದಲ್ಲಿ ದಂಪತಿಗಳಲ್ಲಿ ಪರಸ್ಪರ ವಿರೋಧ, ಆರಂಭದಲ್ಲೇ ಚಿವುಟಿ ಹಾಕುವುದು ಮೇಲು. ವಸ್ತ್ರಾಭರಣ ಖರೀದಿ, ವ್ಯಾಪಾರ-ವ್ಯವಹಾರಗಳು ಮಂದಗತಿಯಲ್ಲಿ ಸಾಗಲಿದ್ದು, ಮೂಲ ಧನದ ಬಗ್ಗೆ ಚಿಂತೆ ಹೆಚ್ಚಲಿದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ವಿಶೇಷ ಆಸಕ್ತಿ, ಸ್ನೇಹಿತರು ನೀಡಲಿರುವ ಸಲಹೆಗಳು ಸಕಾಲದಲ್ಲಿ ಉಪಯೋಗಕ್ಕೆ ಬರಲಿವೆ. ಚಿಕ್ಕಮಕ್ಕಳ ಆರೋಗ್ಯವನ್ನು ಉಪೇಕ್ಷಿಸಬೇಡಿ. ಶತ್ರುಗಳು ತಾವಾಗಿಯೇ ನಿಮಗೆ ಶರಣಾಗುವರು. ದಾಯಾದಿ ಕಲಹಗಳಿಗೆ ಅವಕಾಶ ಬೇಡ, ಹನುಮಂತ ದೇವರಿಗೆ ಎಳ್ಳೆಣ್ಣೆ ದೀಪ ಹಚ್ಚಿ.

#### ಕನ್ಯಾ ರಾಶಿ

ಈ ರಾಶಿಯವರಿಗೆ ವರ್ಷಾರಂಭದಲ್ಲಿ ಅನಾನುಕೂಲಗಳು, ಮತ್ತೊಬ್ಬರು ಕೊಟ್ಟ ಹಣಕಾಸಿನ ಭರವಸೆ ಕೇವಲ ಭರವಸೆಯಾಗಿ ಉಳಿಯಲಿದೆ. ಆದ್ದರಿಂದ ಅದನ್ನು ನಂಬಿಕೊಂಡು ಯಾವುದೇ ಹೊಸ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಹೋಗಬೇಡಿ. ಆಕಸ್ಮಿಕ ಸನ್ನಿವೇಶದಿಂದಾಗಿ ಪರಸ್ಥಳದಲ್ಲಿ ವಾಸ ಮಾಡ ಬೇಕಾದೀತು. ನೀವು ಎಷ್ಟೇ ತಿರುಗಾಡಿದರೂ ಆಗಬೇಕಾದ ಕಾರ್ಯಗಳು ಅದರಲ್ಲೂ ಸರ್ಕಾರದಿಂದ ಆಗಬೇಕಾಗಿರುವ ಕೆಲಸಗಳು ಬಹಳ ಮಂದಗತಿಯಲ್ಲಿ ಸಾಗಲಿವೆ. ಅನಿರೀಕ್ಷಿತವಾಗಿ ಬಂಧುಗಳು ದೂರವಾಗುವರು. ಆದರೆ ವರ್ಷದ ಮಧ್ಯದಲ್ಲಿ ಗುರು ಗ್ರಹವು ಶುಭ ಸ್ಥಾನಕ್ಕೆ ಬರಲಿದ್ದು. ಸಮಾಜದಲ್ಲಿ ನಿಮ್ಮ ಸ್ಥಾನ-ಮಾನಗಳು ಹೆಚ್ಚಲಿವೆ. ಕಾಲಕರ್ಮಗಳ ಸಂಯೋಗದಿಂದ ಆಸ್ತಿಪಾಸ್ತಿಯಲ್ಲಿ ಅಭಿವೃದ್ಧಿ, ಜೊತೆಗೆ ಮನೆಯಲ್ಲಿ ಹಿರಿಯರ ಮಾರ್ಗದರ್ಶನದಲ್ಲಿ ಮಂಗಳ ಕಾರ್ಯಗಳು ನೆರವೇರಲಿವೆ. ಹದಗೆಟ್ಟಿದ್ದ ಆರೋಗ್ಯದಲ್ಲಿ ಸುಧಾರಣೆ, ಅನೇಕ ಪುಣ್ಯಕ್ಷೇತ್ರಗಳ ದರ್ಶನ. ನಿರೀಕ್ಷಿತ ಮೂಲಗಳಿಂದ ಸಹಾಯ ಒದಗಲಿದೆ. ಕೈಗಾರಿಕೋದ್ಯಮಿಗಳಿಗೆ ಕಾರ್ಮಿಕರ ಸಹಕಾರ, ಸತ್ಕರ್ಮಗಳಿಗೆ ಹೆಚ್ಚಿನ ದೇಣಿಗೆ ಸಲ್ಲಿಸುವಿರಿ. ಸಾಲ-ಸೋಲಗಳಿಂದ ಮುಕ್ತರಾಗಲು ಉತ್ತಮ ಅವಕಾಶ, ಮಕ್ಕಳಿಗೆ ಅಧ್ಯಯನದಲ್ಲಿ ನಿರಾಸಕ್ತಿ, ಯಾವುದೇ ವಿಚಾರದಲ್ಲಿ ಆತುರದ ನಿರ್ಧಾರಬೇಡ. ಆದಾಯದಲ್ಲಿ ಕೊರತೆ, ಇಡೀ ವರ್ಷ ಖರ್ಚು-ವೆಚ್ಚಗಳ ಮೇಲೆ ಹಿಡಿತವಿರಲಿ, ನಿರುದ್ಯೋಗಿಗಳಿಗೆ ಉತ್ತಮ ವೇತನದ ನೌಕರಿ ದೊರೆಯಲಿದೆ.

#### ತುಲಾ ರಾಶಿ

ಈ ವರ್ಷ ಶುಭ ಫಲಗಳಿಗಿಂತ ಅಶುಭ ಫಲಗಳೇ ಹೆಚ್ಚೆಂದು ಹೇಳಬಹುದು. ವರ್ಷದಾದಿಯಿಂದ ಅಶುಭರಾಗಿರುವ ಶನಿ-ಗುರು ಗ್ರಹಗಳು ಮನೆಯಲ್ಲಿ ಗೃಹಿಣಿಯರು ಯಾವಾಗಲೂ ಮೌನ ವದನರಾಗಿರುತ್ತಾರೆ. ಎಲ್ಲದರಲ್ಲೂ ನಿರಾಸಕ್ತಿ, ನಿರ್ಲಿಪ್ತತೆ, ಉದಾಸೀನತೆ ಕಾಣಲಿದೆ. ಪ್ರತಿಯೊಬ್ಬರ ಮೇಲೂ ಸಂಶಯ, ಅವಿಶ್ವಾಸ, ಅನಾವಶ್ಯಕ ಖರ್ಚು-ವೆಚ್ಚಗಳು, ಇದರಿಂದಾಗಿ ಕೂಡಿಟ್ಟ ಉಳಿತಾಯವೂ ಕರಗಿ, ಕೈಬರಿದಾಗಿ ನಿಮ್ಮ ಎದುರಾಳಿಗಳಿಂದಲೇ ಸಾಲ ಪಡೆಯಬೇಕಾದ ಸನ್ನಿವೇಶ ಬರ ಬಹುದು. ಅನಾರೋಗ್ಯ ಸಮಸ್ಯೆಯಿಂದಾಗಿ ಹಿರಿಯರಿಗೆ ಹೆಚ್ಚಿನ ಔಷಧೋಪಚಾರಕ್ಕೆ ಚಿಂತೆ ಮಾಡಬೇಕಾದೀತು, ಆತ್ಮೀಯರ ಅಗಲಿಕೆ ಅನಿವಾರ್ಯವಾಗಲಿದೆ. ದುಡುಕಿನಿಂದಾಡುವ ಮಾತುಗಳು ಸಂಬಂಧಿಗಳನ್ನೇ ದೂರಮಾಡಬಹುದು. ಮಾನಸಿಕ ವಿಭ್ರಮೆಗೆ ಒಳಗಾಗಿ ವಿನಾಕಾರಣ ಭಯ, ಆತಂಕಕ್ಕೆ ಒಳಗಾಗುವಿರಿ. ವಿಧೇಯರಾಗಿದ್ದ ಮಕ್ಕಳು ನಿರೀಕ್ಷೆಗೆ ವಿರುದ್ಧವಾಗಿ ನಡೆದುಕೊಳ್ಳುವರು. ನ್ಯಾಯಾಲಯದ ವ್ಯಾಜ್ಯಗಳು ನಿಮ್ಮ ವಿರುದ್ಧವಾಗಿ ತೀರ್ಮಾನವಾಗಲಿವೆ. ವರ್ಷದ ಕೊನೆಯಲ್ಲಿ ಹಣಕಾಸಿನ ಪರಿಸ್ಥಿಯಲ್ಲಿ ತಕ್ಕಮಟ್ಟಿಗೆ ಪ್ರಗತಿ, ಹೂಡಿಕೆ ವ್ಯವಹಾರದಲ್ಲಿ ಲಾಭ ಕಾಣುವಿರಿ. ಸಮಾಜದಲ್ಲಿ ಸನ್ಮಾನಗಳಾಗಲಿವೆ. ಧರ್ಮಾಚರಣೆಯಲ್ಲಿ ಆಸಕ್ತಿ ಮೂಡಲಿದ್ದು, ಜಪ, ತಪಗಳಲ್ಲಿ ತೊಡಗಿಕೊಳ್ಳುವಿರಿ. ರಾಜಕಾರಣಿಗಳು ಆಡಬಾರದ ಮಾತಿನಿಂದ ಸಾರ್ವಜನಿಕವಾಗಿ ಮುಜುಗುರ ಅನುಭವಿಸುವರು. ಸಾಧ್ಯವಾದಷ್ಟು ದೂರ ಪ್ರಯಾಣ ಮಾಡದಿರುವುದು ಲೇಸು. ಖಾಸಗಿ ಕಂಪನಿ ನೌಕರರು ವೃತ್ತಿಯಲ್ಲಿ ನಿಷ್ಠೆಯನ್ನು ಕಾಪಾಡಿಕೊಳ್ಳಿ. ವೈದ್ಯವೃಂದದವರು ಸಾಕಷ್ಟು ಎಚ್ಚರದಿಂದ ಕರ್ತವ್ಯ ನಿರ್ವಹಿಸಿ. ಸಾಧ್ಯವಾದಷ್ಟು ಗುರು ಜಪ , ಗುರು ಚರಿತ್ರೆ ಪಾರಾಯಣ ಮಾಡಿ.

#### ವೃಶ್ಚಿಕ ರಾಶಿ

ಶನಿಗ್ರಹವು ವರ್ಷಪೂರ್ತಿ ಆಶುಭದಾಯಕನಾಗಿದ್ದರೂ, ವರ್ಷದ ಆದಿಯ ನಂತರ ಗುರು ಗ್ರಹವು ಶುಭಸ್ಥಾನದಲ್ಲಿ ಸಂಚರಿಸುವುದರಿಂದ ಹೆಚ್ಚಿನ ಶುಭ ಫಲಗಳನ್ನೇ ಈ ವರ್ಷಪೂರ್ತಿ ಕಾಣುವಿರೆಂದು ಹೇಳಬಹುದು. ಮಕ್ಕಳ ವಿದ್ಯಾಭ್ಯಾಸ, ಉದ್ಯೋಗ ಮೊದಲಾದವುಗಳಲ್ಲಿ ಸಾಕಷ್ಟು ಪ್ರಗತಿ, ನೀವು ಮನಸ್ಸು ಮಾಡಿದಲ್ಲಿ ಭೂಮಿ, ವಾಹನ, ಮೊದಲಾದವುಗಳ ಖರೀದಿ ಸುಸೂತ್ರವಾಗಲಿದೆ. ಉದ್ಯಮದಲ್ಲಿ, ಸಾಕಷ್ಟು ಜನಪ್ರಿಯತೆ ಮತ್ತು ಜನರ ಸಹಕಾರ ಸಿಗಲಿದೆ. ಈ ರೀತಿಯಾಗಿ ಸಕಲ ಸೌಭಾಗ್ಯವೂ ಸಿಗಲಿದೆ. ಅವಿವಾಹಿತ ಮಗನಿಗೆ ಅನಿರೀಕ್ಷಿತವಾಗಿ ಕಂಕಣಭಾಗ್ಯ ಕೂಡಿಬರಲಿದೆ. ಮನೆಯಲ್ಲಿ ಮಂಗಳ ಕಾರ್ಯಗಳು ಮೇಲಿಂದ ಮೇಲೆ ಜರುಗಲಿದ್ದು, ಗುರು ಹಿರಿಯರ ಆಶೀರ್ವಾದವನ್ನು ಪಡೆಯುವಿರಿ. ಈ ನಡುವೆ ಶನಿಗ್ರಹದ ವಕ್ರೀ ಸಂಚಾರದಿಂದಾಗಿ ವ್ಯಾಪಾರ, ವ್ಯವಹಾರಗಳಲ್ಲಿ ಸ್ವಲ್ಪಮಟ್ಟಿಗೆ ಹಿನ್ನಡೆಯುಂಟಾಗ ಬಹುದು.ಹಾಗೆಂದ ಮಾತ್ರಕ್ಕೆ ಚಿಂತಿಸಬೇಕಾಗಿಲ್ಲ. ಆದರೆ ಹಳೆ ರೋಗಗಳು ಸ್ನಾಯು ದೌರ್ಬಲ್ಯ, ಶಾರೀರಿಕ ಪೀಡೆಗಳು ಮತ್ತೆ ಮರುಕಳಿಸುವ ಸಂಭವವಿರುವುದರಿಂದ ವೈದ್ಯರ ಸಂಪರ್ಕದಲ್ಲಿರುವುದು ಮೇಲು.ಎದುರಾಳಿಗಳು ಎಷ್ಟೇ ಬಲಿಷ್ಠರಾಗಿದ್ದರೂ, ನಿಮ್ಮ ಮುಂದೆ ಸೋತು ಶರಣಾಗುವರು. ಆದಾಯದಲ್ಲೂ ಸಾಕಷ್ಟು ಹೆಚ್ಚಳ ಕಂಡುಬರುವುದರಿಂದ ಹಣಕಾಸಿನ ಚಿಂತೆಬೇಡ. ಅಪರಿಚಿತ ಮಹಿಳೆಯರ ವಿಚಾರದಲ್ಲಿ ಕುತೂಹಲ ಬೇಡ. ಈ ನಡುವೆ ತೀರ್ಥಯಾತ್ರೆ ಮಾಡಬೇಕೆಂಬ ಹೆಬ್ಬಯಕೆ ಮೂಡಲಿದ್ದು, ಅದಕ್ಕೆ ಬೇಕಾದ ಸಿದ್ಧತೆ ಮಾಡಿಕೊಳ್ಳುವಿರಿ. ಅಧ್ಯಾತ್ಮ ಚಿಂತನೆ ವಿಶೇಷವಾಗಿ ನಡೆಯಲಿದೆ. ಕೃಷಿಕರಿಗೆ ಸೇವಕ ವರ್ಗದಿಂದ ಸಂಪೂರ್ಣ ಸಹಕಾರ, ಆಸ್ತಿ ವಿಚಾರದಲ್ಲಿ ಸೋದರನೊಂದಿಗೆ ಸಹಕರಿಸಿಕೊಂಡು ಹೋಗಿ ಇದರ ಪರಿಣಾಮ ಮುಂದೆ ನಿಮಗೇ ತಿಳಿಯಲಿದೆ.

#### ಧನು ರಾಶಿ

ಈ ರಾಶಿಯವರಿಗೆ ವರ್ಷದ ಆದಿಯಲ್ಲಿ ಶನಿ-ಗುರು ಈ ಎರಡೂ ಗ್ರಹಗಳೂ ಕೂಡ, ಅಶುಭ ಸ್ಥಾನದಲ್ಲಿಯೇ ಸಂಚರಿಸುವುದರಿಂದ ಮತ್ತು ನೇರ ನಡೆನುಡಿ ಸ್ವಭಾವದ ನಿಮಗೆ ಹಣಕಾಸಿನ ವಿಚಾರದಲ್ಲಿ ಇಲ್ಲ ಸಲ್ಲದ ತೊಂದರೆಗೆ ಸಿಲುಕಿಕೊಂಡು ಅಶಾಂತಿಯಿಂದಾಗಿ ಊರೂರು ಅಲೆದಾಡುವ ಪ್ರಸಂಗ ಬರಲಿದೆ. ಎಲ್ಲೇ ಹೋದರು ಮನಶ್ಶಾಂತಿ ಎಂಬುದು ಗಗನ ಕುಸುಮವಾಗಲಿದೆ. ಶತ್ರುಗಳ ಪೀಡೆ, ಕೂಡಿಟ್ಟ ಹಣವೂ ಅಪವ್ಯಯವಾಗಿ ದಿಗ್ಭ್ರಾಂತರಾಗುವಿರಿ. ಇದರೊಂದಿಗೆ ಗಾಯದ ಮೇಲೆ ಹುಣ್ಣು ಎಂಬಂತೆ ಬಂಧು-ಮಿತ್ರರೊಂದಿಗೆ ವಿವಾದ ಹುಟ್ಟಿಕೊಂಡು ಅವರನ್ನು ದ್ವೇಷಿಸುವಿರಿ. ಮನೆಯಲ್ಲಿರುವ ಸಾಕು ಪ್ರಾಣಿಗಳಿಂದ ತೊಂದರೆ. ಕೈಗೊಂಡ ಕಾರ್ಯಗಳೆಲ್ಲವೂ ನಿರರ್ಥಕವಾಗಲಿವೆ. ಸಾಡೇಸಾಥ್‌ನ ಕೊನೆಯ ಭಾಗದಲ್ಲಿರುವ ನಿಮಗೆ ಬೇರೆ ಮೂಲಗಳಿಂದ ಎಷ್ಟೇ ಆರ್ಥಿಕ ನೆರವು ಹರಿದು ಬಂದರೂ ಸುಖ, ನೆಮ್ಮದಿ ಕಾಣದಾಗುವಿರಿ. ರಾಜಕಾರಣಿಗಳಿಗೆ ಪಕ್ಷದ ವರಿಷ್ಠರ ಅವಕೃಪೆಯಿಂದಾಗಿ, ಮುಜುಗರವುಂಟಾಗಲಿದೆ. ಇದರ ನಡುವೆ ಮಕ್ಕಳ ವಿದ್ಯಾಭ್ಯಾಸವು ಎಲ್ಲೂ ಮುಕ್ಕಾಗದಂತೆ ಪ್ರಗತಿ ಪಥದಲ್ಲಿ ಸಾಗುವುದು, ಉದ್ಯಮಿಗಳ ವಿಷಯ ಹೇಳಬಹುದಾದರೆ, ಲೇವಾದೇವಿ ಮತ್ತು ಸರಾಫ್ ವ್ಯವಹಾರಗಳು ಲಾಭದತ್ತ ಸಾಗಲಿವೆ. ಆಮದು ಮತ್ತು ರಫ್ತು ಉದ್ಯಮಿದಾರರಿಗೆ ಹೆಚ್ಚಿನ ಅವಕಾಶಗಳು ಸಿಗಲಿವೆ. ಮತ್ತೊಬ್ಬರ ವಾಹನಗಳನ್ನು ಚಾಲಿಸುವಾಗ ಅಪಘಾತವಾಗುವ ಸಂಭವವಿದ್ದು, ಸಾಕಷ್ಟು ಎಚ್ಚರದಿಂದಿರಿ. ಕೋಪವೆಂಬುದು ಎಲ್ಲಾ ಅನರ್ಥಗಳಿಗೂ ಕಾರಣವಾದ್ದ ರಿಂದ ಈ ವರ್ಷಪೂರ್ತಿ ಸಾಕಷ್ಟು ತಾಳ್ಮೆಯಿಂದಿರುವುದು ಉತ್ತಮ. ಸರ್ಕಾರದ ಮಟ್ಟ ದಲ್ಲಿರುವ ಉನ್ನತಾಧಿಕಾರಿಗಳಿಗೆ ತನಿಖಾ ಮಟ್ಟದ ಬಿಸಿ ತಾಗಲಿದೆ, ಸಾಧ್ಯವಾದಷ್ಟು ಗುರು-ಶನಿ ಗ್ರಹಗಳ ಜಪ, ಗುರು ಚರಿತ್ರೆ ಪಾರಾಯಣ ಮತ್ತು ವಿಷ್ಣು ಸಹಸ್ರ ನಾಮ ಪಾರಾಯಣ ಮಾಡುವುದು ಲೇಸು. ಸಾಧ್ಯವಿದ್ದಲ್ಲಿ ಸಾಧು ಸಜ್ಜನರ ದರ್ಶನ ಮಾಡಿ.

#### ಮಕರ ರಾಶಿ

ನೀವು ಎಷ್ಟೇ ಚತುರಮತಿಗಳಾಗಿದ್ದರೂ ಕೂಡ, ಗ್ರಹಗಳ ಪಲ್ಲಟ -ವಕ್ರೀಗತಿಗಳಿಂದಾಗಿ ಹೆಚ್ಚಿನ ಶುಭ ಫಲಗಳನ್ನು ಕಾಣುವುದು ಕಷ್ಟ.ನಿಮಗೆ ವರ್ಷದ ಆದಿಯಲ್ಲಿಯೂ ಶುಭ ಫಲವಿಲ್ಲ ಮತ್ತು ವರ್ಷದ ಅಂತ್ಯದಲ್ಲೂ ಶುಭ ಫಲವಿಲ್ಲ. ಎಷ್ಟೇ ವ್ಯವಸ್ಥಿತವಾಗಿ ಕೆಲಸ ಹಮ್ಮಿಕೊಂಡಿದ್ದರೂ, ಅದಕ್ಕೆ ಹಲವಾರು ವಿಘ್ನಗಳು ಎದುರಾಗಲಿವೆ. ಇಷ್ಟಜನರ ವಿರೋಧ ಕಟ್ಟಿಕೊಂಡು, ಅವರನ್ನಗಲಿ ದೂರ ಪ್ರದೇಶದಲ್ಲಿ ವಾಸ ಮಾಡಬೇಕಾಗಬಹುದು. ನಾನಾ ರೀತಿಯ ಕಷ್ಟಗಳನ್ನು ಎದುರಿಸುವುದರ ಜೊತೆಗೆ, ಅನೇಕ ಅಗ್ನಿಪರೀಕ್ಷೆಗೆ ಗುರಿಯಾಗಬೇಕಾದೀತು. ನೆರೆಹೊರೆಯವರೊಂದಿಗೆ ವಿನಾಕಾರಣ ವೈಮನಸ್ಸು ಬೆಳೆಯಬಹುದು. ಆಕಸ್ಮಿಕ ಎಂಬಂತೆ, ವೈದ್ಯಕೀಯ ವೆಚ್ಚಗಳನ್ನು ಭರಿಸಬೇಕಾದೀತು. ಆದಾಯ ಎಷ್ಟೇ ಹೆಚ್ಚಿದ್ದರೂ ಕೂಡ ಖರ್ಚಿನ ಬಾಬ್ತು ವಿಪರೀತವಾಗುವುದರಿಂದ ಆರ್ಥಿಕ ಮುಗ್ಗಟ್ಟು ಹೆಚ್ಚಬಹುದು. ಸಾಡೇಸಾಥ್ ನಡೆಯುತ್ತಿರುವುದರಿಂದ ಮತ್ತು ರಾಶಿಯಿಂದ ದ್ವಿತೀಯ ಸ್ಥಾನದಲ್ಲಿರುವುದರಿಂದ, ಎಲ್ಲಾ ಕಡೆಯಿಂದ ಭೀತಿ ಮತ್ತು ಆಸ್ತಿಗೆ ಸಂಬಂಧಿಸಿದ ವಿಚಾರಗಳು ನಿಮಗೆ ವಿರುದ್ಧವಾಗಲಿವೆ. ಆಗಾಗ ಸಣ್ಣಪುಟ್ಟ ಅನಾರೋಗ್ಯ ಸಮಸ್ಯೆಗಳು ಎದುರಾಗಲಿವೆ. ವಾಹನ ಚಾಲನೆ ಮೋಜಿಗಲ್ಲ ಎಂಬುದರ ಅರಿವು ಇದ್ದಲ್ಲಿ ಕ್ಷೇಮ. ವೃಥಾ ತಿರುಗಾಟ,ಮತ್ತು ಮೇಲಾಧಿಕಾರಿಗಳಿಂದ ಸಾಕಷ್ಟು ಕಿರುಕುಳ ಹೆಚ್ಚಬಹುದು. ಅನಾವಶ್ಯಕ ತಿರುಗಾಟದಿಂದ ಮತ್ತು ಅತಿಯಾದ ಮೋಜಿನಿಂದಾಗಿ ಉದರ ಬಾಧೆ ಮುಂತಾದ ಸಮಸ್ಯೆ ಬಾಧಿಸಲಿದೆ. ವೈದ್ಯ ವೃಂದದವರಿಗೆ ಬೇಡಿಕೆ ಬರಲಿದ್ದು, ಆದಾಯವೂ ಹೆಚ್ಚಲಿದೆ. ವಿದ್ಯಾರ್ಥಿಗಳು ಅಧ್ಯಯನದಲ್ಲಿ ಉದಾಸೀನತೆ ತೋರುವರು, ಆದರೆ ಭವಿಷ್ಯದ ದೃಷ್ಟಿಯಿಂದ ಈ ಸೋಮಾರಿತನ ಒಳ್ಳೆಯದಲ್ಲ. ರಾಜಕಾರಣಿಗಳು ಲೋಕಾಯುಕ್ತ ಅಥವಾ ತೆರಿಗೆ ಇಲಾಖೆ ಮುಂತಾದ ಸಂಸ್ಥೆಗಳಿಂದ ತನಿಖೆ ಎದುರಿಸಬೇಕಾದೀತು. ಆದ್ದರಿಂದ ಸಾಧ್ಯವಾದಷ್ಟು ಕುಲದೇವತಾ ಸ್ಮರಣೆ, ಸ್ತೋತ್ರ ಪಠಿಸುವುದು ಉತ್ತಮ.

#### ಕುಂಭ ರಾಶಿ

ಈ ರಾಶಿಯವರಿಗೆ ಈ ವರ್ಷ ಗುರುಗ್ರಹವು ದ್ವಿತೀಯ ಸ್ಥಾನಕ್ಕೂ, ಶನಿಗ್ರಹವು ವ್ಯಯ ಸ್ಥಾನದಲ್ಲಿ ಸಂಚರಿಸುವುದರಿಂದ, ಶುಭ ಫಲವನ್ನು ಹೆಚ್ಚಿನ ಪ್ರಮಾಣದಲ್ಲೂ, ಅಶುಭ ಫಲವನ್ನು ಅಲ್ಪಪ್ರಮಾಣದಲ್ಲಿ ಕಾಣುವಿರಿ. ಮತ್ತೊಬ್ಬರ ಹಿತವನ್ನೇ ಸದಾ ಚಿಂತಿಸುವ ನಿಮಗೆ, ಎರಡನೇ ಭಾವದಲ್ಲಿ ಗುರು ಸಂಚಾರವು ಏಪ್ರಿಲ್ ತಿಂಗಳಿಂದ ಆರಂಭವಾಗಲಿದ್ದು, ಹಣಕಾಸಿನ ಸಂಪಾದನೆ ಸಾಕಷ್ಟು ಹೆಚ್ಚಲಿದೆ. ಜೊತೆಗೆ ನೀವು ತಾಂತ್ರಿಕ ವಿದ್ಯಾಲಯಗಳನ್ನು ನಡೆಸುವವರಾಗಿದ್ದಲ್ಲಿ ಹೆಚ್ಚಿನ ಲಾಭ ಕಾಣುವಿರಿ. ಸಾಮಾಜಿಕ ಸೇವಾ ಸಂಸ್ಥೆಗಳಲ್ಲಿ ತೊಡಗಿಕೊಂಡವರಾಗಿದ್ದಲ್ಲಿ, ಅನೇಕ ಪ್ರಶಸ್ತಿ, ಪುರಸ್ಕಾರಗಳು ಅರಸಿ ಬರಲಿವೆ. ನೂತನ ಮನೆ ಅಥವಾ ನಿವೇಶನವನ್ನು ಹೊಂದಲು ಇದು ಸಕಾಲವಾಗಿದ್ದು, ಈ ಸಮಯವನ್ನು ಸದುಪಯೋಗಪಡಿಸಿಕೊಳ್ಳಿ. ಮನೆಯಲ್ಲಿ ಅನೇಕ ಮಂಗಲ ಕಾರ್ಯಗಳು ಜರುಗಲಿದ್ದು, ಅದರ ಸಾರಥ್ಯ ನಿಮ್ಮದಾಗಲಿದೆ. ಅವಿವಾಹಿತರಿಗೆ ಈ ವರ್ಷ ಖಂಡಿತವಾಗಿಯೂ ಕಂಕಣಭಾಗ್ಯ ಕೂಡಿಬರಲಿದೆ. ನಿಮ್ಮ ವಾಕ್ಚಾತುರ್ಯದಿಂದಲೇ ಎಂತಹ ಕಷ್ಟಕರವಾದ ಕಾರ್ಯಗಳನ್ನೂ ಕೂಡ ಸುಲಭವಾಗಿ ಮಾಡಿಕೊಂಡು ಬರುವಿರಿ. ವಿದ್ಯಾರ್ಥಿಗಳು ಅಧ್ಯಯನದಲ್ಲಿ ಹೆಚ್ಚಿನ ಸಾಧನೆ ಮಾಡಿ, ಯಶಸ್ಸಿನ ಹಾದಿಯಲ್ಲಿ ಮುಂದೆ ಸಾಗುವರು. ಆದರೆ ವ್ಯಾಪಾರ-ವ್ಯವಹಾರಗಳಲ್ಲಿ ಹೆಚ್ಚಿನ ಜಾಗ್ರತೆಯಿಂದಿರುವುದು ಮೇಲು. ವ್ಯಯ ಸ್ಥಾನದಲ್ಲಿರುವ ಶನಿ, ಯಶಸ್ಸಿನ ಬೆನ್ನೇರಿ ಹೊರಟ ನಿಮಗೆ, ತುಸು ಕಡಿವಾಣ ಹಾಕುವನು. ಕಷ್ಟಪಟ್ಟು ಸಂಪಾದನೆ ಮಾಡಿ ಕೂಡಿಟ್ಟ ಸಂಪತ್ತು ಅಥವಾ ಅಮೂಲ್ಯ ವಸ್ತುಗಳು ಕಳ್ಳಕಾಕರ ಪಾಲಾಗಬಹುದು. ಅನಿರೀಕ್ಷಿತ ಘಟನೆಗಳಿಂದಾಗಿ ಮನಸ್ಸು ಜರ್ಝರಿತವಾಗುವುದು. ಪ್ರಯಾಣ ಕಾಲದಲ್ಲಿ ಅನೇಕ ಅಡಚಣೆಯುಂಟಾಗಲಿದೆ. ಸೋದರನೊಂದಿಗೆ ಅನಾವಶ್ಯಕವಾಗಿ ವಾಗ್ವಾದ ನಡೆದು, ಅದು ವಿಕೋಪಕ್ಕೆ ಹೋಗಬಹುದು. ತೀರ್ಥಯಾತ್ರೆಯಿಂದ ಧನ್ಯತಾಭಾವ ಮೂಡಲಿದೆ.ಪದವೀಧರರು, ಶ್ರಮಪಟ್ಟುಮಾಡಿದ ಪ್ರಯತ್ನಗಳು ವ್ಯರ್ಥವಾಗುವ ಸಂಭವವಿದೆ.

#### ಮೀನ ರಾಶಿ

ದ್ವಿ ಸ್ವಭಾವದ ರಾಶಿ ಸಂಬಂಧಿಯವರಾದ ನಿಮಗೆ ಗುರು ಗ್ರಹವು ಮೀನ ರಾಶಿ ಯಲ್ಲೂ ಶನಿಗ್ರಹದ ವಕ್ರೀಭಾವದಿಂದ ವರ್ಷಾರಂಭದಲ್ಲಿ ಲಾಭ ಸ್ಥಾನದಲ್ಲಿ ಸಂಚರಿಸುವುದರಿಂದ, ಸಮದರ್ಶಿತ್ವದೊಂದಿಗೆ ದ್ವಿಮುಖ ನೀತಿಯ ಸ್ವಭಾವದ ನಿಮಗೆ, ಸಂಬಂಧಪಡದ ವಿಷಯಗಳಿಗೆಲ್ಲಾ ವೃಥಾ ಚಿಂತೆ ಮಾಡುವುದರಲ್ಲೇ ಈ ವರ್ಷವೆಲ್ಲಾ ಕಳೆಯುವಿರಿ. ಅನಾವಶ್ಯಕ ಖರ್ಚುಗಳಿಂದಾಗಿ, ಅಪಾರ ಹಣ ಖರ್ಚು ಮಾಡುವಿರಿ. ನೀವು ಖಾಸಗಿ ಕಂಪನಿ ಉದ್ಯೋಗಿಗಳಾಗಿದ್ದಲ್ಲಿ ಅನಪೇಕ್ಷಿತ ಸ್ಥಳಕ್ಕೆ ವರ್ಗಾವಣೆಯಾಗಲಿದೆ ಅಥವಾ ಸ್ಥಾನ ಭ್ರಷ್ಟತೆಯಾಗಬಹುದು. ಸ್ವಜನರಲ್ಲಿ ಮಾಡುವ ಕಲಹ, ದ್ವೇಷಗಳಿಂದಾಗಿ ಬಂಧುಗಳಲ್ಲಿ ನಿಷ್ಠೂರರಾಗುವಿರಿ. ರಾಜಕಾರಣಿ ಗಳು, ಹಿಂಬಾಲಕರ ಚಿತಾವಣೆಯಿಂದಾಗಿ, ಪಕ್ಷದಲ್ಲಿ ಸ್ಥಾನ ಭ್ರಷ್ಟರಾಗುವರು. ಜೊತೆಗೆ ಸಿಗಬೇಕಾಗಿದ್ದ ಪದೋನ್ನತಿಯಿಂದ ವಂಚಿತರಾಗುವಿರಿ. ಚಿತ್ತಭ್ರಮಣೆ ಯಿಂದಾಗಿ ಎಲ್ಲರನ್ನೂ ಸಂಶಯದಿಂದಲೇ ನೋಡುವಿರಿ. ಆಸ್ತಿಗೆ ಸಂಬಂಧಿಸಿದಂತೆ ಅನಾವಶ್ಯಕವಾಗಿ ಕೋರ್ಟ್-ಕಛೇರಿ ಅಲೆದಾಡಬೇಕಾದೀತು. ಸರ್ಕಾರೀ ನೌಕರರು ಮೇಲಾಧಿಕಾರಿಗಳ ಅಸಹಕಾರದಿಂದ, ವರ್ಗಾವಣೆ ಶಿಕ್ಷೆ ಅನುಭವಿಸಬೇಕಾದೀತು. ಶನಿ ಗ್ರಹವು ಲಾಭ ಸ್ಥಾನದಲ್ಲಿದ್ದಾಗ, ಗೃಹ ನಿರ್ಮಾಣ ಸಾಮಗ್ರಿಗಳ ವ್ಯಾಪಾರಿಗಳಿಗೆ ಹೆಚ್ಚಿದ ವಹಿವಾಟಿನಿಂದಾಗಿ ಲಾಭಾಧಿಕ್ಯವಾಗಲಿದೆ. ಗುತ್ತಿಗೆದಾರರಿಗೆ ಉತ್ತಮ ಅವಕಾಶಗಳು ಬರಲಿದ್ದು, ಅದರಿಂದ ಅವರ ಆರ್ಥಿಕ ಸಮಸ್ಯೆಗಳು ಪರಿಹಾರ ವಾಗಲಿವೆ. ಅನೇಕ ವಿಧವಾದ ಸುಖ ಪ್ರಾಪ್ತಿ, ವೈಭವೋಪೇತ ಜೀವನ ನಡೆಸುವರು. ಮುಂದೆ ಸಾಡೇಸಾಥ್ ಪ್ರಾರಂಭವಾಗಲಿದ್ದು, ಬೇರೆಯರ ವ್ಯವಹಾರದಲ್ಲಿ ಪ್ರವೇಶಿಸಿ ಮಾನ ನಷ್ಟವಾಗಬಹುದು. ಕುಟುಂಬದಲ್ಲಿ ಅಹಿತಕರ ಘಟನೆಯೊಂದು ನಡೆಯಲಿದ್ದು, ಅದರಿಂದಾಗಿ, ಪರಸ್ಥಳದಲ್ಲಿ ವಾಸಮಾಡಬೇಕಾದೀತು. ಅವಿರತ ಕೆಲಸ, ಕಾರ್ಯಗಳಿಂದಾಗಿ ದಣಿದ ದೇಹ, ಅನಾರೋಗ್ಯಕ್ಕೆ ಈಡಾಗಲಿದೆ. ದೂರಪ್ರಯಾಣ ಅಷ್ಟು ಹಿತಕರವಲ್ಲ. ಆದಷ್ಟು ಗೋ ಸೇವೆ ಮಾಡಿ. ಗುರು ಜಪ ಉತ್ತಮ.

**ವಿಶೇಷ ಸೂಚನೆ : ಮೇಲೆ ವಿಮರ್ಶಿಸಲಾದ ಎಲ್ಲಾ ದ್ವಾದಶ ರಾಶಿಗಳ ಫಲಾಫಲಗಳನ್ನು ಸರ್ವೇ ಸಾಮಾನ್ಯವಾಗಿ ವಿಮರ್ಶಿಸಲಾಗಿದ್ದು, ಅವರವರ ಜಾತಕಗಳ ಗ್ರಹಗತಿ ಹಾಗೂ ದಶಾಭುಕ್ತಿಗಳಿಗೆ ಅನುಗುಣವಾಗಿ, ವ್ಯತ್ಯಾಸವಾಗುವ ಸಂಭವವಿರುತ್ತದೆ.**

- ಜಯತೀರ್ಥಾಚಾರ್ ವಡೇರ್, ದಾವಣಗೆರೆ.
ಫೋ. : 94486 66678

# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಏಪ್ರಿಲ್ 02, 2022

## ಓದುಗರಲ್ಲಿ ಕೋರಿಕೆ..

**ಪತ್ರಿಕಾ ಮುದ್ರಣ ವೆಚ್ಚ ಇತಿಹಾಸದಲ್ಲಿಯೇ ಗರಿಷ್ಠ ಮಟ್ಟಕ್ಕೆ ತಲುಪಿದೆ. ಅಗತ್ಯ ವಸ್ತುಗಳೆಲ್ಲದರ ಬೆಲೆ ಏರಿಕೆಯಾಗಿರುವುದು ತಮ್ಮ ಗಮನದಲ್ಲಿರುವ ಸಂಗತಿಯೇ ಆಗಿದೆ. ಇಂತಹ ಪರಿಸ್ಥಿತಿಯಲ್ಲಿ ಪತ್ರಿಕೆಯ ಬೆಲೆ ಪರಿಷ್ಕರಿಸುವ ಅನಿವಾರ್ಯತೆ ಎದುರಾಗಿದೆ. ಇನ್ನು ಮುಂದೆ ಪ್ರತಿದಿನ ಜನತಾವಾಣಿ ಪತ್ರಿಕೆಯ ದರ 5 ರೂ. ಹಾಗೂ ಭಾನುವಾರದಂದು ಮಾತ್ರ 6 ರೂ. ಆಗಿರಲಿದೆ. ಓದುಗರು ಎಂದಿನಂತೆಯೇ ಸಹಕರಿಸಬೇಕಾಗಿ ಕೋರಿಕೆ.**

**- ವ್ಯವಸ್ಥಾಪಕ**





# ಬೆಲೆ ಬಿಸಿಯ ನಡುವೆಯೂ ಚುರುಕಾದ ಯುಗಾದಿ ಭರಾಟೆ

## ಶುಭಕೃತ ಸಂವತ್ಸರ ಹೊಸ ಹರುಷ ತರಲೆಂಬ ನಿರೀಕ್ಷೆಯಲ್ಲಿ ಹಬ್ಬದಾಚರಣೆ

ದಾವಣಗೆರೆ, ಏ. 1 - ಬೇವು ಬೆಲ್ಲದ ಹಬ್ಬವಾಗಿರುವ ಯುಗಾದಿಯ ವೇಳೆ ಕೊರೊನಾ ಮರೆಯಾದ ಸಿಹಿ ಬಂದಿದ್ದರೆ, ಬೆಲೆ ಏರಿಕೆಯ ಕಹಿಯೂ ಸೇರಿಕೊಂಡಿದೆ. ಪೆಟ್ರೋಲ್‌ನಿಂದ ಹಿಡಿದು ಅಡುಗೆ ಎಣ್ಣೆಯವರೆಗೆ ಬೆಲೆ ಏರಿಕೆಯ ಕಹಿಯ ನಡುವೆಯೂ ಜನ ಹಬ್ಬಕ್ಕಾಗಿ ಖರೀದಿ ನಡೆಸಿದ್ದಾರೆ.

ಕೊರೊನಾದಿಂದಾಗಿ ಕಳೆದ ಎರಡು ವರ್ಷಗಳಲ್ಲಿ ಎಲ್ಲಾ ಹಬ್ಬಗಳು ಏರುಪೇರಾಗಿದ್ದವು. ಈ ಬಾರಿ ಯಾವುದೇ ತೊಡಕಿಲ್ಲದೇ ಯುಗಾದಿ ಹಿಂದೂಗಳಿಗೆ ಹೊಸ ವರ್ಷದ ಆರಂಭ ತಂದಿದೆ. ಶುಭಕೃತ ಸಂವತ್ಸರ ಹೊಸ ಹರುಷ ತರಲಿದೆ ಎಂಬ ಆಶಾ ಭಾವನೆಯನ್ನೂ ಮೂಡಿಸಿದೆ.

**ಮಾರುಕಟ್ಟೆಯಲ್ಲಿ ಸಿಹಿ - ಕಹಿ :** ಎರಡು ಚೀಲದಷ್ಟು ಬೇವು ಹಾಗೂ ಮಾವಿನ ಎಲೆಗಳನ್ನು ತಂದಿದ್ದೆ. ಕಳೆದ ವರ್ಷದಂತೆಯೇ ಈ ವರ್ಷವೂ ವ್ಯಾಪಾರವಾಗಿದೆ. ಕಟ್ಟು ಬೇವು - ಮಾವಿಗೆ ತಲಾ 10 ರೂ. ಬೆಲೆ ಎಂದು ಜಗಳೂರಿನ ಮಾದಾಹಳ್ಳಿಯ ಶಿವಪ್ಪ ತಿಳಿಸಿದ್ದಾರೆ.

ಗಂಗಮ್ಮ ಅವರಲ್ಲದೇ ಸುಮಾರು 10-15 ಜನರು ಸಿರಿಗೆರೆ ಹಳೆ ರಂಗಾಪುರದಿಂದ ಬಂದಿದ್ದು ಹಬ್ಬಕ್ಕೆ ಬೇವು-ಮಾವು, ಲೋಳೆಸರ ಇತ್ಯಾದಿಗಳನ್ನು ಮಾರುತ್ತಿದ್ದು, ಈ ಬಾರಿಯ ವ್ಯಾಪಾರ ಉತ್ತಮವಾಗಿದೆ ಎಂದಿದ್ದಾರೆ.

ಆದರೆ, ಹಣ್ಣಿನ ವ್ಯಾಪಾರಿಗಳಿಗೆ ತುಸು ನಿರಾಸೆಯೇ ಇದೆ. ಹಬ್ಬ ಬಂದರೂ ವ್ಯಾಪಾರ ಡಲ್ ಎಂದವರು ಹೇಳಿದ್ದಾರೆ. ಸಾಮಾನ್ಯ ದಿನಕ್ಕೆ ಹೋಲಿಸಿದರೂ ವ್ಯಾಪಾರ ಕಡಿಮೆ ಇದೆ ಎಂದು ನಗರದ ಕುಂಬಾರ ಪೇಟೆಯ ಸಿದ್ದಮ್ಮ ತಿಳಿಸಿದ್ದಾರೆ. ಹಣ್ಣುಗಳ ಬೆಲೆಯೂ ಸ್ವಲ್ಪ ಏರಿಕೆಯಾಗಿದೆ. ಸೇಬು ಕೆ.ಜಿ.ಗೆ 140 ರೂ., ಮೋಸಂಬಿ 80 ರೂ., ದಾಳಿಂಬೆ 160 ರೂ. ಆಗಿದೆ.

ದಿನಸಿ ಬೆಲೆಗಳು ನಿರಂತರ ಏರಿಕೆಯಾಗುತ್ತಲೇ ಇವೆ. ಎಣ್ಣೆ ಬೆಲೆಯಂತೂ ಬಿಸಿಯೇಟಿನಂತಿದೆ. ಇಷ್ಟೆಲ್ಲದರ ನಡುವೆಯೂ ಕಳೆದ ವರ್ಷದ ಬೆಲೆಯಲ್ಲೇ ಹೋಳಿಗೆ ಮಾರುತ್ತಿದ್ದೇವೆ. ಹೆಚ್ಚು ಲಾಭವಿಲ್ಲ, ಹಾಗಂತ ವೃತ್ತಿ ಬಿಡುವ ಹಾಗಿಲ್ಲ ಎಂದು ಹೊಂಡದ ಸರ್ಕಲ್‌ನ ಹೋಳಿಗೆ ವ್ಯಾಪಾರಿ ವೆಂಕಟೇಶ್ ಹೇಳಿದ್ದಾರೆ.

ಯುಗಾದಿ ಹಬ್ಬ ಹತ್ತಿರವಾಗುತ್ತಿದ್ದಂತೆ ಬೇಳೆ ಕೆಜಿಗೆ 100 ರೂ., ಬೆಲ್ಲ 45 ರೂ. ಆಗಿದೆ. ಅಡುಗೆ ಎಣ್ಣೆ ಬೆಲೆ 200 ರೂ.ಗಳವರೆಗೆ ತಲುಪಿದೆ. ಬೆಲೆ ಬಿಸಿಯಾದರೂ, ಜನ ಅನಿವಾರ್ಯವಾದ ಅಗತ್ಯ ವಸ್ತುಗಳ ಖರೀದಿಯಲ್ಲಿ ತೊಡಗಿದ್ದು ಮಾರುಕಟ್ಟೆಯಲ್ಲಿ ಕಂಡು ಬಂತು.

**ಹೋಳಿಗೆ - ಶಾವಿಗೆ ಜೊತೆಗೆ :** ಯುಗಾದಿ ಅಮವಾಸ್ಯೆ ಗುರುವಾರ ಮಧ್ಯಾಹ್ನ ಪ್ರವೇಶವಾಗಿದ್ದು, ಶುಕ್ರವಾರ ಮಧ್ಯಾಹ್ನದವರೆಗೂ ಇದೆ. ಹೀಗಾಗಿ ಶಾವಿಗೆ ಹಾಗೂ ಹೋಳಿಗೆ ಯಾವಾಗ ಮಾಡಬೇಕೆಂಬ ಬಗ್ಗೆ ಭಿನ್ನ ನಿಲುವು ಉಂಟಾಗಿದ್ದು ಕಂಡು ಬಂದಿದೆ.

ಕೆಲವರು ಶುಕ್ರವಾರ ಶಾವಿಗೆ - ಶನಿವಾರ ಹೋಳಿಗೆ ಎನ್ನುತ್ತಿದ್ದಾರೆ. ಇನ್ನು ಕೆಲವರು ಶಾವಿಗೆ - ಹೋಳಿಗೆ ಶನಿವಾರ ಜೊತೆ ಜೊತೆಗೆ ಎನ್ನುತ್ತಿದ್ದಾರೆ.

ಕೊರೊನಾ ಅಡ್ಡಿ ಇಲ್ಲದೇ ಹೊಸ ವರ್ಷದ ಹೊಸ ಕನಸುಗಳನ್ನು ತರುವ ಯುಗಾದಿ ಸಂಭ್ರಮದ ಆಚರಣೆಗೆ ಮಾರ್ಗ ತೆರವಾಗಿರುವುದು ಹೊಸ ಆಶಾ ಭಾವನೆಗಳನ್ನು ತಂದಿದೆ. ಸಂಕಷ್ಟಗಳೆಲ್ಲ ಸುಗಮವಾಗಿ ಸರಿದು, ಸಂಭ್ರಮದ ದಿನಗಳು ಬರುವ ಆಶಯದಲ್ಲಿ ಜನರು ಹಿಂದೂ ಪಂಚಾಂಗದ ಮೊದಲ ಹಬ್ಬವನ್ನು ಸಂಭ್ರಮಿಸುವಲ್ಲಿ ತೊಡಗಿದ್ದಾರೆ.

## ಸಿದ್ದಗಂಗಾ ಶ್ರೀಗಳಿಗೆ ಪ್ರಧಾನಿ ಮೋದಿ ನಮನ

ನವದೆಹಲಿ, ಏ. 1 – ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಜನ್ಮ ದಿನದಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನಮನ ಸಲ್ಲಿಸಿದ್ದು, ಅವರ ಸರಿಸಾಟಿಯಿಲ್ಲದ ಸಾಮುದಾಯಿಕ ಸೇವೆ ಸದಾ ಸ್ಮರಣೀಯ ಎಂದಿದ್ದಾರೆ.

ಡಾ. ಶ್ರೀ ಶಿವಕುಮಾರ ಸ್ವಾಮೀಜಿಯವರ ಜಯಂತಿಯಂದು ನಾನು ನನ್ನ ಗೌರವ ನಮನ ಸಲ್ಲಿಸುವೆ. ಸ್ವಾಮೀಜಿಯವರು ಅಸಂಖ್ಯಾತ ಜನರ ಹೃದಯದಲ್ಲಿ ಅಮರರಾಗಿದ್ದಾರೆ ಎಂದು ಪ್ರಧಾನಿ ಹೇಳಿದ್ದಾರೆ. ಆರೋಗ್ಯ ಹಾಗು (7ನೇ ಪುಟಕ್ಕೆ)

## ರಾಜ್ಯಕ್ಕೆ ಭೇಟಿ ನೀಡಿದ ಕೇಂದ್ರ ಸಚಿವ ಅಮಿತ್ ಷಾ

### ಚುನಾವಣಾ ಸಿದ್ಧತೆಗೆ ಬಿಜೆಪಿ ಚಾಲನೆ

ಬೆಂಗಳೂರು, ಏ. 1 - ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಗೆ ಬಿಜೆಪಿ ರಣಕಹಳೆ ಮೊಳಗಿಸಿದೆ. ಕೇಂದ್ರ ಗೃಹ ಸಚಿವರೂ ಆಗಿರುವ ಬಿಜೆಪಿ ಹಿರಿಯ ನಾಯಕ ಅಮಿತ್ ಷಾ ಅವರು ರಾಜ್ಯ ಭೇಟಿಯಲ್ಲಿ ಚುನಾವಣಾ ಸಿದ್ಧತೆಗೆ ಚಾಲನೆ ನೀಡಿದ್ದಾರೆ.


ಕೇಂದ್ರ ಗೃಹ ಸಚಿವ ಅಮಿತ್ ಷಾ ಇಂದು ಇಡೀ ದಿನ ರಾಜ್ಯದ ಮೂರು ಜಿಲ್ಲೆಗಳಲ್ಲಿ ಸಂಚರಿಸಿದ್ದಲ್ಲದೆ, ಖಾಸಗಿ ಮತ್ತು ಸರ್ಕಾರಿ ಕಾರ್ಯಕ್ರಮ ಹಾಗೂ ಪಕ್ಷದ ಮುಖಂಡರ ಸಭೆಯನ್ನುದ್ದೇಶಿಸಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಚುನಾವಣೆಗೆ ಸಿದ್ದರಾಗುವಂತೆ ಕರೆ ನೀಡಿದ್ದಾರೆ. ಅಷ್ಟೇ ಅಲ್ಲ ಕರ್ನಾಟಕದಲ್ಲಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಲಿಂಗಾಯತ ವೀರಶೈವ ಸಮುದಾಯದ ಮತಗಳನ್ನು ಪಡೆಯಲು ತುಮಕೂರಿನ ಸಿದ್ದಗಂಗಾ ಕ್ಷೇತ್ರದಲ್ಲಿ ಶಿವಕುಮಾರ್ ಸ್ವಾಮೀಜಿ ಅವರ 115ನೇ ವರ್ಷದ ಗುರುವಂದನಾ ಮತ್ತು ಜಯಂತ್ಯೋತ್ಸವದಲ್ಲಿ ಭಾಗವಹಿಸಿ, ಕ್ಷೇತ್ರದ ಕಾರ್ಯವೈಖರಿ, ಮಠದ ಶಿಕ್ಷಣ (7ನೇ ಪುಟಕ್ಕೆ)

## ರೇಣುಕಾಚಾರ್ಯ ಗಡೀಪಾರು ಮಾಡಲು ಡಾ. ವೈ.ರಾಮಪ್ಪ ಆಗ್ರಹ



ದಾವಣಗೆರೆ, ಏ.1- ಬೇಡ ಜಂಗಮ ಎಂಬ ನಕಲಿ ಹಣೆಪಟ್ಟಿ ಕಟ್ಟಿಕೊಂಡು ರಾಜ್ಯದಲ್ಲಿ ಅರಾಜಕತೆ ಸೃಷ್ಟಿಸಿ, ಪರಿಶಿಷ್ಟ ಜಾತಿಯವರಲ್ಲಿ ಭಯ ಹುಟ್ಟಿಸಿ ಅಶಾಂತಿ ವಾತಾವರಣ ನಿರ್ಮಿಸಲು ಯತ್ನಿಸುತ್ತಿರುವ ಎಂ.ಪಿ. ದಾರುಕೇಶ್ವರಯ್ಯ ಹಾಗೂ ಅವರ ಬೆನ್ನ ಹಿಂದೆ ಕಾರ್ಯ ನಿರ್ವಹಿಸುತ್ತಿರುವ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರನ್ನು ಕೂಡಲೇ ಬಂಧಿಸಿ, ಗಡೀಪಾರು ಮಾಡುವಂತೆ ಪ್ರಗತಿಪರ ಹಾಗೂ ಸ್ವಾಭಿಮಾನಿ ಎಸ್ಸಿ-ಎಸ್ಟಿ (7ನೇ ಪುಟಕ್ಕೆ)

## ಮಧ್ಯಾಹ್ನದ ಬಿಸಿ ಊಟದ ಯೋಜನೆಗೆ ಶಿವಕುಮಾರ ಸ್ವಾಮೀಜಿ ಹೆಸರು



ಬೆಂಗಳೂರು, ಏ. 1- ಸಿದ್ಧಗಂಗಾ ಶ್ರೀ ಶಿವಕುಮಾರ ಸ್ವಾಮೀಜಿ ಗಳ ಜಯಂತಿಯನ್ನು ದಾಸೋಹ ದಿನ ಎಂದು ಈಗಾಗಲೇ ಸರ್ಕಾರ ಆಚರಿಸಲಾಗುತ್ತಿದೆ. ಮಧ್ಯಾಹ್ನದ ಬಿಸಿ ಊಟದ ಯೋಜನೆಗೆ ಡಾ. ಶ್ರೀ ಶಿವಕುಮಾರ ಸ್ವಾಮೀಜಿಗಳ ಹೆಸರನ್ನಿಡಲು ಸರ್ಕಾರ ಕ್ರಮಕೈಗೊಳ್ಳ ಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ತುಮಕೂರಿನ ಶ್ರೀ ಸಿದ್ದಗಂಗಾ ಮಠದಲ್ಲಿ ಆಯೋಜಿಸಿದ್ದ ಡಾ. ಶ್ರೀ ಶಿವಕುಮಾರ ಮಹಾಶಿವಯೋಗಿಗಳ 115ನೇ ಜಯಂತೋತ್ಸವ ಹಾಗೂ ಗುರುವಂದನಾ ಮಹೋತ್ಸವ ದಲ್ಲಿ ಮಾತನಾಡಿದ ಅವರು, ಈ ಬಗ್ಗೆ ಆದೇಶ ಹೊರಡಿಸ ಲಾಗುವುದು ಎಂದಿದ್ದಾರೆ. ಭಕ್ತಿಯಿಂದ ಬಸವಣ್ಣನವರ ದಾಸೋಹ, ಶಿಕ್ಷಣ, ಆರೋಗ್ಯ ತತ್ವಗಳಿಗೆ ನಮ್ಮ ಸರ್ಕಾರ ಮಹತ್ವ ನೀಡಿದೆ. ಸರ್ವೋದಯ ಕಾರ್ಯಕ್ರಮಕ್ಕೆ 60 ಸಾವಿರ ಕೋಟಿ ರೂ.ಗಳಿಗಿಂತ ಹೆಚ್ಚು ಅನುದಾನವನ್ನು ಈ ವರ್ಷದ ಬಜೆಟ್ ನಲ್ಲಿ ಮೀಸಲಿರಿಸಿದೆ. ಜನಕಲ್ಯಾಣಕ್ಕಾಗಿ ಹಾಗೂ ಜನರ ಪರವಾಗಿ ನಮ್ಮ ಸರ್ಕಾರ ಕೆಲಸ ಮಾಡಲಿದೆ ಎಂದು (7ನೇ ಪುಟಕ್ಕೆ)

## 150 ಸ್ಥಾನ ಗೆಲ್ಲಲು ರಾಹುಲ್ ಕರೆ



ಬೆಂಗಳೂರು, ಏ. 1 - ಮುಂಬ ರುವ ವಿಧಾನಸಭಾ ಚುನಾವ ಣೆಯಲ್ಲಿ 150 ಸ್ಥಾನಗಳನ್ನು ಗೆದ್ದು, ಪಕ್ಷವನ್ನು ಅಧಿಕಾರಕ್ಕೆ ತರಲೇಬೇ ಕೆಂದು ಕಾಂಗ್ರೆಸ್ ಅಧಿನಾಯಕ ರಾಹುಲ್‌ಗಾಂಧಿ ರಾಜ್ಯ ನಾಯಕರಿಗೆ ಕರೆ ನೀಡಿದ್ದಾರೆ.

ಪ್ರದೇಶ ಕಾಂಗ್ರೆಸ್ ಕಚೇರಿಯ ಆಡಿ ಟೋರಿಯಂನಲ್ಲಿ ನಡೆದ ಮುಖಂಡರ ಸಭೆ ಯಲ್ಲಿ ಪಕ್ಷ ಹೇಗೆ ಮುಂಬರುವ ಚುನಾವಣೆ ಯನ್ನು ಎದುರಿಸಬೇಕು ಎಂಬ ಮಾರ್ಗ ದರ್ಶನ ನೀಡಿದ್ದಲ್ಲದೆ, ನೀವು ಒಗ್ಗಟ್ಟಾಗಿ ಚುನಾವಣೆ ಎದುರಿಸಿದರೆ, ಈ ಗುರಿ ದೊಡ್ಡದಲ್ಲ ಎಂದಿದ್ದಾರೆ.

ಗೆಲ್ಲುವ ಗುರಿ ಇಟ್ಟುಕೊಂಡು ಸಾಗಬೇಕು. ನಾವು ಒಟ್ಟಾಗಿ ಸರಿಯಾದ ವಿಚಾರವಿಟ್ಟುಕೊಂಡು ಹೋರಾಟ ಮಾಡಿದರೆ, ಇದು ಕಷ್ಟವಲ್ಲ. ಅಲ್ಪಮತದಿಂದ ಅಧಿಕಾರ ಹಿಡಿಯುತ್ತೇವೆ ಎಂಬ ಭ್ರಮೆ ಬಿಡಿ. 150 ಗುರಿ ಇಟ್ಟುಕೊಂಡು ಭ್ರಷ್ಟ ಬಿಜೆಪಿ ಸರ್ಕಾರದ ವೈಫಲ್ಯಗಳನ್ನು ಜನರಿಗೆ ತಿಳಿಸಿ. ನಿಮ್ಮ ಗುರಿ ಮುಟ್ಟಿ ಎಂದಿದ್ದಾರೆ. ಗುರಿ ಮುಟ್ಟಲು ಯುವಕರು ಮತ್ತು ಮಹಿಳೆಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ ಮತ್ತು ಅವರನ್ನು ಪ್ರೋತ್ಸಾಹಿಸಿ, ಕಾರ್ಯಕರ್ತರನ್ನು ಹುರಿದುಂಬಿಸುವ ಕೆಲಸ ಮಾಡಿ ಎಂದು ಕಿವಿಮಾತು ಹೇಳಿದ್ದಾರೆ.

ಕರ್ನಾಟಕ ಕಾಂಗ್ರೆಸ್ ಪರ ರಾಜ್ಯ. ಇದು ಸ್ವಾಭಾವಿಕ ಕಾಂಗ್ರೆಸ್ ರಾಜ್ಯ. ಎಲ್ಲ ನಾಯಕರು ಒಟ್ಟಾಗಿ ಕೆಲಸ ಮಾಡಿದರೆ ನಮ್ಮ ಗುರಿ ಮೀರಿ ಸಾಧನೆ ಮಾಡಬಹುದು. ಹೀಗಾಗಿ ಕಾಂಗ್ರೆಸ್ ನಾಯಕರೆಲ್ಲರೂ ಮುಂಬರುವ ಚುನಾವಣೆಯಲ್ಲಿ ಗುರಿ ಇಟ್ಟುಕೊಂಡು ಹೋರಾಟ ಮಾಡಿ (7ನೇ ಪುಟಕ್ಕೆ)

## ವೈಮಾನಿಕ ಇಂಧನ ಬೆಲೆ ದಾಖಲೆ ಹಂತಕ್ಕೆ



**ವಾಣಿಜ್ಯ ಎಲ್.ಪಿ.ಜಿ. ಬೆಲೆ 250 ರೂ.ಗಳಷ್ಟು ಏರಿಕೆ**

ನವದೆಹಲಿ, ಏ. 1 – ಕೇಂದ್ರ ಸರ್ಕಾರ ವೈಮಾನಿಕ ಇಂಧನದ ಬೆಲೆಯನ್ನು ಶೇ.2ರಷ್ಟು ಹೆಚ್ಚಿಸಿದೆ. ಈ ವರ್ಷ ಸತತ ಏಳನೇ ಬಾರಿಗೆ ವೈಮಾನಿಕ ಇಂಧನದ ಬೆಲೆ ಹೆಚ್ಚಿಸಿರುವುದರಿಂದ, ದೇಶದಲ್ಲಿ ಈ ತೈಲದ ಬೆಲೆ ದಾಖಲೆ ಮಟ್ಟಕ್ಕೆ ತಲುಪಿದೆ.

ರಾಜಧಾನಿ ದೆಹಲಿಯಲ್ಲಿ ಕಿಲೋ ಲೀಟರ್ ತೈಲದ ಬೆಲೆಯನ್ನು 2,258.54 ರೂ.ಗಳಷ್ಟು ಹೆಚ್ಚಿಸಿ 1,12,924.83 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಪ್ರತಿ ಲೀಟರ್ ತೈಲದ ಬೆಲೆ 112.92 ರೂ. ಆಗಿದೆ.

ಈ ನಡುವೆ ವಾಣಿಜ್ಯ ಬಳಕೆಯ ಅಡುಗೆ ಅನಿಲದ ಬೆಲೆಯನ್ನು 249.50 ರೂ.ಗಳಷ್ಟು ಹೆಚ್ಚಿಸಲಾಗಿದೆ. ಇದರಿಂದಾಗಿ 19 ಕೆ.ಜಿ. ಸಿಲಿಂಡರ್ ಬೆಲೆ 2,253 ರೂಗಳಿಗೆ ತಲುಪಿದೆ.

ಆದರೆ, ಮನೆಗಳಲ್ಲಿ ಬಳಸುವ ಅಡುಗೆ (7ನೇ ಪುಟಕ್ಕೆ)

## ಬಡ್ತಿ ಮೀಸಲಾತಿ ರದ್ದತಿಯಿಂದ ಅಸಹನೆ

**ಪರಿಶಿಷ್ಟ ಜಾತಿ ಹಾಗೂ ಪಂಗಡಗಳಿಗೆ ಬಡ್ತಿಯಲ್ಲಿ ಮೀಸಲಾತಿ ಕಲ್ಪಿಸುವುದರ ಪರ ಸುಪ್ರೀಂ ಕೋರ್ಟ್‌ನಲ್ಲಿ ಸರ್ಕಾರದ ಅರ್ಜಿ**

ನವದೆಹಲಿ, ಏ. 1 – ಪದೋನ್ನತಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಮೀಸಲಾತಿ ರದ್ದುಗೊಳಿಸುವುದರಿಂದ ಉದ್ಯೋಗಿಗಳಲ್ಲಿ ಅಸಹನೆ ಹಾಗೂ ಹಲವಾರು ಪ್ರಕರಣಗಳು ಉದ್ಭವಿಸುತ್ತವೆ ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರರಾವ್ ಹಾಗೂ ಬಿ.ಆರ್. ಗವಾಯಿ ಅವರನ್ನು ಒಳಗೊಂಡ ಪೀಠದ ಎದುರು ಪ್ರಮಾಣ ಪತ್ರ ಸಲ್ಲಿಸಿರುವ ಕೇಂದ್ರ ಸರ್ಕಾರ, ಸಂವಿಧಾನ ಹಾಗೂ ನ್ಯಾಯಾಂಗ ರೂಪಿಸಿರುವ ಕಾಯ್ದೆಗಳಿಗೆ ಅನುಗುಣವಾಗಿ ಮೀಸಲಾತಿ ನೀತಿ ರೂಪಿಸಲಾಗಿದೆ ಎಂದು ಹೇಳಿದೆ. ಸರ್ಕಾರದ ಮೀಸಲಾತಿಗೆ (7ನೇ ಪುಟಕ್ಕೆ)

# ಸಮಾಜಕ್ಕಾಗಿ ಶ್ರಮಿಸಿದ ಸಿದ್ಧಗಂಗಾ ಶ್ರೀಗಳು

### ಸಿದ್ಧಗಂಗಾ ಶ್ರೀಗಳ 115ನೇ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಅಣಬೇರು ರಾಜಣ್ಣ



ದಾವಣಗೆರೆ, ಏ.1- ಜಾತಿ ಭೇದವಿಲ್ಲದೆ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೂ, ಶಿಕ್ಷಣ, ಅನ್ನದಾಸೋಹ ನೀಡಿದ ಸಿದ್ಧಗಂಗಾ ಶ್ರೀಗಳನ್ನು ಪಡೆದುದು ಕನ್ನಡ ನಾಡು ಹಾಗೂ ನಮ್ಮೆಲ್ಲರ ಪುಣ್ಯ ಎಂದು ಉದ್ಯಮಿ ಅಣಬೇರು ರಾಜಣ್ಣ ಹೇಳಿದರು.

ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ನಗರದ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರ 115ನೇ ಜನ್ಮದಿನೋತ್ಸವದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸಮಾಜದಲ್ಲಿ ಇತರರಿಗೆ ಸಹಾಯ ಮಾಡದವರು ಬದುಕ್ಕಿದ್ದೂ ಸತ್ತಂತೆ. ಆದರೆ ಸಿದ್ಧಗಂಗಾ ಶ್ರೀಗಳು ಸಮಾಜಕ್ಕಾಗಿ ಶ್ರಮಿಸಿ ಇಂದಿಗೂ ನಮ್ಮೊಂದಿಗಿದ್ದಾರೆ ಎಂದರು. ಟೀಕೆ ಟಿಪ್ಪಣಿಗಳಿಗೆ ತಲೆ ಕೆಡಿಸಿಕೊಳ್ಳಬಾರದು. ಆದಷ್ಟು ಇತರರಿಗೆ ಸಹಾಯ ಮಾಡುತ್ತಾ ಬದುಕಬೇಕು ಎಂದು ಕರೆ ನೀಡಿದರು.

115 ವರ್ಷಗಳ ಇತಿಹಾಸವಿರುವ ಅಖಿಲ ಭಾರತ ವೀರಶೈವ ಮಹಾಸಭಾ ಸೊರಗುವ ಆತಂಕವಿತ್ತು. ಆದರೆ ಶಾಮನೂರು ಶಿವಶಂಕರಪ್ಪನವರು ಅಧ್ಯಕ್ಷರಾದ ನಂತರ ಮತ್ತೆ ಸಕ್ರಿಯವಾಯಿತು. ಪ್ರತ್ಯೇಕ ಲಿಂಗಾಯತ ಧರ್ಮಕ್ಕೆ ಕಾಂಗ್ರೆಸ್ ಬೆಂಬಲಿಸಿದಾಗ ವೀರಶೈವ-ಲಿಂಗಾಯತ ಒಂದೇ ಎಂದು ಹೇಳಿಕೆ ನೀಡುವ ಮೂಲಕ ರಾಜಕೀಯ ಮುಖ್ಯವಲ್ಲ, ಸಮಾಜ ಮುಖ್ಯ ಎಂದು ತೋರಿಸಿಕೊಟ್ಟವರು ಎಸ್ಸೆಸ್ ಎಂದು ಹೇಳಿದರು.

ಉದ್ಯಮಿ ಅಥಣಿ ವೀರಣ್ಣ ಮಾತನಾಡಿ, ಸಿದ್ಧಗಂಗಾ ಶ್ರೀಗಳ ಸಾಧನೆ ವರ್ಣನೆಗೆ ಎಷ್ಟು ಸಮಯವಿದ್ದರೂ ಸಾಲದು ಎಂದರು.

ವೀರಶೈವ ಲಿಂಗಾಯತರು ಬಹುಸಂಖ್ಯಾತರಿದ್ದರೂ ಸಭೆ-ಸಮಾರಂಭಗಳಲ್ಲಿ ಕಡಿಮೆ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿದ್ದೇವೆ. ಹಾನಗಲ್ ಕುಮಾರ ಸ್ವಾಮೀಜಿ ಅವರು ವೀರಶೈವ ಮಹಾಸಭಾ ಸ್ಥಾಪಿಸುವ ಮೂಲಕ ಸಂಘಟನೆಗೆ ಶ್ರಮಿಸಿದರು ಎಂದು ಸ್ಮರಿಸಿದರು.

ಇದೀಗ ವೀರಶೈವ ಮಹಾಸಭಾದ ಜಿಲ್ಲಾ ಘಟಕವು ಲಿಂಗಾಯತ ಸಮಾಜದ ಒಳ ಪಂಗಡಗಳನ್ನು ಒಟ್ಟುಗೂಡಿಸಿ ಕಾರ್ಯಕ್ರಮ ನಡೆಸುತ್ತಿರುವುದು ಶ್ಲಾಘನೀಯ. ಮುಂದಿನ ದಿನಗಳಲ್ಲೂ ಎಲ್ಲಾ ಪಂಗಡಗಳೂ ಒಂದಾಗಿದ್ದರೆ ಸಮಾಜದ ಏಳ್ಗೆ ಸಾಧ್ಯವಿದೆ. ಈ ನಿಟ್ಟಿನಲ್ಲಿ ಜಿಲ್ಲಾಧ್ಯಕ್ಷರು ಕ್ರಮ ವಹಿಸಬೇಕು ಎಂದರು.

ಶಾಮನೂರು ಶಿವಶಂಕರಪ್ಪನವರು ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರಾಗುವ ಮೊದಲು ಈ ಸಂಸ್ಥೆ ಇರುವುದೇ ಹಲವರಿಗೆ ತಿಳಿದಿರಲಿಲ್ಲ. ಕೆಲವು ವ್ಯಕ್ತಿಗಳು ಮಾಡುವ ಕೆಲಸಗಳಿಂದ ಸಂಘ-ಸಂಸ್ಥೆಗಳು ಬೆಲೆ ಹೆಚ್ಚಾಗುತ್ತದೆ ಎಂದು ಶಿವಶಂಕರಪ್ಪನವರು ಕಾರ್ಯಗಳ ಬಗ್ಗೆ ಮೆಚ್ಚುಗೆ (7ನೇ ಪುಟಕ್ಕೆ)

## ಕಾಂಗ್ರೆಸ್‌ನಿಂದ ಸಿದ್ಧಗಂಗಾ ಶ್ರೀ ಸ್ಮರಣೆ

**ಬಸವಣ್ಣನವರ ಜಾತ್ಯತೀತ ಮನೋಭಾವ ನಮ್ಮ ಮೂಲ ಮಂತ್ರವಾಗಲಿ: ದಿನೇಶ್ ಕೆ.ಶೆಟ್ಟಿ**

ದಾವಣಗೆರೆ, ಏ. 1- ದಾವಣಗೆರೆಯಲ್ಲಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಲಿಂಗೈಕ್ಯ ಡಾ.ಶಿವಕುಮಾರ ಸ್ವಾಮೀಜಿ ಅವರ 115ನೇ ಜಯಂತಿ ಹಿನ್ನೆಲೆಯಲ್ಲಿ ಶುಕ್ರವಾರದಂದು ಶ್ರೀಗಳು ಸ್ಮರಿಸಲಾಯಿತು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಮಾತನಾಡಿ ಸಿದ್ದಗಂಗಾ ಮಠದಲ್ಲಿ ಯಾವುದೇ ಜಾತಿ, ಧರ್ಮವನ್ನು ನೋಡದೆ ಭ್ರಾತೃತ್ವ ಪ್ರಚಾರ ಮಾಡುವ ಕೆಲಸ ನಡೆದಿದ್ದು, ಪ್ರಸ್ತುತ ದ್ವೇಷ ಬಿತ್ತುತ್ತಿರುವ ಇಂತಹ ಸಮಯದಲ್ಲಿ ಸಿದ್ಧಗಂಗಾ ಮಠದ ಜಾತ್ಯತೀತ ಸಂದೇಶ ನಮಗೆಲ್ಲ ಮಾದರಿಯಾಗಿದೆ ಎಂದರು.

ಮಹಾನಗರ ಪಾಲಿಕೆ ವಿಪಕ್ಷ ನಾಯಕ ಜಿ.ಎಸ್. ಮಂಜುನಾಥ್ ಮಾತನಾಡಿ ಬಸವಣ್ಣನ ಸಂದೇಶವನ್ನು ಜಗತ್ತಿಗೇ ತಿಳಿಸುವ ಪ್ರಯತ್ನದಲ್ಲಿ ಮಠ, ಸ್ವಾಮೀಜಿ ಸಾಗಿದ್ದಾರೆ. ತ್ರಿವಿಧ ದಾಸೋಹದ ಮೂಲಕ ನಾಡಿಗೆ ಮಾದರಿ ಸಂದೇಶ ನೀಡಿದ್ದಾರೆ. ಅವರ ದಾರಿಯಲ್ಲಿ ನಾವೆಲ್ಲ ಸಾಗಬೇಕಿದೆ. ಆದರೆ ಈಗ ಅವರಿಲ್ಲ ಎಂಬುದು ದುಃಖದ ಸಂಗತಿ ಎಂದು ತಿಳಿಸಿದರು.

ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್. ಮಲ್ಲಿಕಾರ್ಜುನ್ ಮಾತನಾಡಿ ಸಿದ್ಧಗಂಗಾ ಮಠ ಶಿಕ್ಷಣ, ದಾಸೋಹಕ್ಕೆ ಪ್ರಸಿದ್ಧಿ, ಬಸವಣ್ಣನವರ ಜಾತ್ಯತೀತ ಮನೋಭಾವಕ್ಕೆ ಉತ್ತಮ ಉದಾಹರಣೆಯಾಗಿದೆ ಎಂದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯ ಎ.ನಾಗರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಅಯೂಬ್ ಪೈಲ್ವಾನ್, ಕೆ.ಜಿ.ಶಿವಕುಮಾರ್, ಸಾಮಾಜಿಕ ಜಾಲತಾಣದ (7ನೇ ಪುಟಕ್ಕೆ)



## ಮೆಕ್ಕೆಜೋಳ ಖರೀದಿಗೆ ಕರ್ನಾಟಕ ಪ್ರಸ್ತಾವನೆ ಕಳಿಸಿಲ್ಲ : ಕೇಂದ್ರ

ನವದೆಹಲಿ, ಏ. 1 – ಕನಿಷ್ಠ ಬೆಂಬಲ ಬೆಲೆಯಲ್ಲಿ ಮೆಕ್ಕೆಜೋಳ ಖರೀದಿಸಲು ಕರ್ನಾಟಕ ಯಾವುದೇ ಪ್ರಸ್ತಾವನೆ ಕಳಿಸಿಲ್ಲ ಎಂದು ಕೇಂದ್ರ ಆಹಾರ ಸಚಿವ ಪಿಯೂಶ್ ಗೋಯಲ್ ರಾಜ್ಯಸಭೆಗೆ ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಮಾತನಾಡಿದ ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡ, ಕರ್ನಾಟಕದಲ್ಲಿ 7 ಲಕ್ಷ ಟನ್ ರಾಗಿ ಖರೀದಿಸಲು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ತಮ್ಮ ತವರು ಜಿಲ್ಲೆ ಹಾಸನದಲ್ಲಿ ಕೇವಲ ಒಂದು ಟನ್ ರಾಗಿ ಮಾತ್ರ ಖರೀದಿಸಲಾಗಿದೆ ಎಂದು ಹೇಳಿದ್ದರು.

ಇದೇ ರೀತಿ ಮೆಕ್ಕೆಜೋಳವನ್ನೂ ಖರೀದಿಸಲಾಗುತ್ತಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರ ಜವಾಬ್ದಾರಿ ಹೊರಬೇಕು ಹಾಗೂ ಖರೀದಿಗೆ ಭರವಸೆ ನೀಡಬೇಕು ಎಂದು ಒತ್ತಾಯಿಸಿದ್ದರು.

ಇದಕ್ಕೆ ಉತ್ತರ ನೀಡಿದ ಗೋಯಲ್, ದೇವೇಗೌಡರು ಹಿರಿಯ ನಾಯಕರು. ಸರ್ಕಾರ ಕಾರ್ಯ ನಿರ್ವಹಿಸುವ ಇಡೀ ಪ್ರಕ್ರಿಯೆ ಅವರಿಗೆ ತಿಳಿದಿದೆ. ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ರಾಜ್ಯ ಸರ್ಕಾರಗಳು ರಾಗಿ ಹಾಗೂ ಮೆಕ್ಕೆಜೋಳ ಸೇರಿದಂತೆ ಯಾವುದೇ ಉತ್ಪನ್ನ ಖರೀದಿಸಿ ವಿತರಣೆ ಮಾಡಬಹುದು ಎಂದು (7ನೇ ಪುಟಕ್ಕೆ)




# ಹುಟ್ಟುಹಬ್ಬದ ಶುಭಾಶಯಗಳು

ದಿನಾಂಕ 02.04.2022ರ ಶನಿವಾರ ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ನಮ್ಮ ಅಂಗಡಿಯ ಮಾಲೀಕರಾದ ಶ್ರೀ ಎಂ.ಎಸ್. ವಿಠಲ್ ಅವರ ಪುತ್ರರಾದ

**ಶ್ರೀ ಎಂ.ವಿ. ಸುಮಂತ್ (ಗಣೇಶ್)**

ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು.

ಸಿಬ್ಬಂದಿ ವರ್ಗ

**ಮಹೇಂದ್ರಕರ್ ಟೆಕ್ಸ್‌ಟೈಲ್ಸ್**

ನರಸರಾಜ ರಸ್ತೆ, ದಾವಣಗೆರೆ.

## ಸರ್ವರಿಗೂ ಯುಗಾದಿ ಹಬ್ಬದ ಶುಭಾಶಯಗಳು

ಶ್ರೀ ಗುರು ಮರುಳಸಿದ್ಧೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ.) ಮತ್ತು ಹಿಂದೂ ವಧು-ವರರ ಮಾಹಿತಿ ಕೇಂದ್ರ

SGM Tours **ಎಸ್.ಜಿ.ಎಂ. ಟೂರ್ಸ್**

ಬಾಣಾಪುರ ಆಸ್ಪತ್ರೆ ಎದುರು, 8ನೇ ಮೇನ್, ಪಿ.ಜೆ.ಬಡಾವಣೆ, ದಾವಣಗೆರೆ.

**ವಿಮಾನ ಮತ್ತು ಬಸ್ಸಿನಲ್ಲಿ 14 ದಿನಗಳ ಚಾರ್‌ಧಾಮ್ ವಿಶೇಷ ಯಾತ್ರೆ**

ಜೂನ್‌ನಲ್ಲಿ ಯಾತ್ರೆ

(ರಾಜ್ಯ ಧಾರ್ಮಿಕ ದತ್ತಿ ಇಲಾಖೆಯಿಂದ ರೂ. 20,000 ಸಬ್ಸಿಡಿ ಇರುತ್ತದೆ.)*

ಕೆಲವೇ ಸೀಟುಗಳಿವೆ

ಸಂದರ್ಶಿಸುವ ಸ್ಥಳಗಳು :

ನವದೆಹಲಿ, ಹರಿದ್ವಾರ, ಋಷಿಕೇಶ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಗುಪ್ತಕಾಶಿ, ಕೇದಾರನಾಥ ಮತ್ತು ಬದರೀನಾಥ

ಸಂಪರ್ಕಿಸಿ : 9448159303, 7892510652




**ಶ್ರೀಮತಿ ರಶ್ಮಿ,** ಮಿಸಸ್ ಇಂಡಿಯಾ

"ನೋವಿಗೆ ಕುಗ್ಗದೆ, ನಲಿವಿಗೆ ಹಿಗ್ಗದೆ, ನೋವು- ನಲಿವುಗಳನ್ನು ಸಮಾನವಾಗಿ ಸ್ವೀಕರಿಸಿ" ಎಂದು ಸಾರುವ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು...



*ಶುಭಾಶಯಗಳೊಂದಿಗೆ :*

**ಶ್ರೀಮತಿ ರೇಖಾ ನಾಗರಾಜ್**

ಮಾಜಿ ಮಹಾಪೌರರು, ಮಹಾನಗರ ಪಾಲಿಕೆ, ದಾವಣಗೆರೆ.

## ಯುಗಾದಿ ಹಬ್ಬದ ಶುಭಾಶಯಗಳು

ನೂತನ 'ಶುಭಕೃತು' ನಾಮ ಸಂವತ್ಸರ ಯುಗಾದಿ ಹಬ್ಬದ ಈ ಶುಭ ಸಂದರ್ಭದಲ್ಲಿ ನಮ್ಮೆಲ್ಲಾ ಬಂಧು-ಮಿತ್ರರಿಗೆ ಹೃತ್ಪೂರ್ವಕ ಶುಭಾಶಯಗಳು.



**ಡಿ. ಕೆ. ಸಂಗಮೇಶ್ ಎಲಿಗಾರ್**

ಪತ್ರ ಬರಹಗಾರರು, ಸಬ್ ರಿಜಿಸ್ಟ್ರಾರ್ ಕಚೇರಿ ಆವರಣ, ಪಿ. ಬಿ. ರಸ್ತೆ, ದಾವಣಗೆರೆ. ಮೊ.: 98440 65710

## ಯುಗಾದಿ ಹಬ್ಬದ ಶುಭಾಶಯಗಳು

ನೂತನ 'ಶುಭಕೃತು' ನಾಮ ಸಂವತ್ಸರ ಯುಗಾದಿ ಹಬ್ಬದ ಈ ಶುಭ ಸಂದರ್ಭದಲ್ಲಿ ನಮ್ಮೆಲ್ಲಾ ಬಂಧು-ಮಿತ್ರರಿಗೆ ಹೃತ್ಪೂರ್ವಕ ಶುಭಾಶಯಗಳು.



**ಪವಾಡಪ್ಪ ತಿಪ್ಪೇಸ್ವಾಮಿ**

ದಸ್ತಾವೇಜು ಬರಹಗಾರರು, ಸಬ್ ರಿಜಿಸ್ಟ್ರಾರ್ ಕಛೇರಿ ಆವರಣ, ಪಿ.ಬಿ. ರಸ್ತೆ, ದಾವಣಗೆರೆ. ಮೊ.: 98443 31765

## ಸರ್ವರಿಗೂ ಯುಗಾದಿ ಹಬ್ಬದ ಶುಭಾಶಯಗಳು

**ಶ್ರೀಗಂಧಾ'ಸ್ ಆನೆಕೊಂಡ ಹನುಮಂತಪ್ಪ ಕನ್‌ವೆನ್ಷನ್ ಹಾಲ್ A/c**

ಓಷನ್ ಪಾರ್ಕ್ ಫ್ಯಾಮಿಲಿ ಗಾರ್ಡನ್ ರೆಸ್ಟೋರೆಂಟ್ ಆವರಣ, ಡಿ.ಸಿ. ಕಚೇರಿ ಹತ್ತಿರ, ಜಿ.ಎಂ.ಐ.ಟಿ. ಕಾಲೇಜು ಮುಂಭಾಗ, ಪಿ.ಬಿ. ರಸ್ತೆ, ದಾವಣಗೆರೆ.



**ಶ್ರೀಗಂಧಾ'ಸ್ ಆನೆಕೊಂಡ ಹನುಮಂತಪ್ಪ ಕನ್‌ವೆನ್ಷನ್ ಹಾಲ್**

ಸುಸಜ್ಜಿತ ಮತ್ತು ಅತ್ಯಾಧುನಿಕವಾಗಿದ್ದು, ಇಲ್ಲಿ ಆರತಕ್ಷತೆ, ನಾಮಕರಣ, ಜನ್ಮದಿನ ಸಮಾರಂಭ, ಸಂಭ್ರಮಾಚರಣೆ, ಸಭೆ - ಸಮಾರಂಭಗಳಿಗೆ ಅನುಕೂಲವಾಗಿರುವ AC ಹಾಲ್ ಬಾಡಿಗೆಗೆ ಸಿಗುತ್ತದೆ. ಪ್ರತ್ಯೇಕ ಅಡುಗೆ ಕೋಣೆ ವ್ಯವಸ್ಥೆ ಇರುತ್ತದೆ.

ಸಂಪರ್ಕಿಸಿ: 94485 89727, 70196 74592





## ಮಾಯಕೊಂಡ ಕ್ಷೇತ್ರದ ವಿವಿಧ ಭಾಗಗಳಲ್ಲಿ ಶ್ಯಾಮ್ ಹುಟ್ಟುಹಬ್ಬ: ಶುಭ ಹಾರೈಕೆಗಳು

ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡ ಜಿ.ಎಸ್. ಶ್ಯಾಮ್ ಅವರ ಹುಟ್ಟುಹಬ್ಬವನ್ನು ಕ್ಷೇತ್ರದ ವಿವಿಧ ಭಾಗಗಳಲ್ಲಿ ಆಚರಿಸಲಾಯಿತು. ಗ್ರಾಮದ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಸಂಯುಕ್ತವಾಗಿ ಸೇರಿ, ಸಾಮಾಜಿಕ ಸೇವಾ ಚಟುವಟಿಕೆಗಳೊಂದಿಗೆ ಕೇಕ್ ಕತ್ತರಿಸಿ, ಜನ್ಮದಿನವನ್ನು ಆಚರಿಸಲಾಯಿತು.



ಶ್ಯಾಮ್ ಅವರಿಗೆ ಕೇಕ್ ತಿನ್ನಿಸುವುದರೊಂದಿಗೆ ಶುಭ ಹಾರೈಸಿದ ಕಾಶಿಪುರ ಸಿದ್ದೇಶ್, ಅತ್ತಿಗೆರೆ ದೇವರಾಜ್, ಆಕಾಶ್ ಆಲೂರು, ಶಿವಕುಮಾರ್ ಮತ್ತು ಇತರರು.



ಚಿನ್ನಸಮುದ್ರದಲ್ಲಿ ಯುವಕರಿಗೆ ಕೇಕ್ ತಿನ್ನಿಸುತ್ತಿರುವ ಜಿ.ಎಸ್. ಶ್ಯಾಮ್



ಗಿರಿಯಾಪುರದಲ್ಲೂ ಶ್ಯಾಮ್ ಅವರಿಂದ ಕೇಕ್ ಕತ್ತರಿಸಿ ಸಂಭ್ರಮಿಸಿದ ಯುವಕರು ಮತ್ತು ಮುಖಂಡರು

# 150 ಸ್ಥಾನ ಗೆಲ್ಲಲು ರಾಹುಲ್ ಕರೆ

**(3ನೇ ಪುಟದಿಂದ)** ಎನ್ನುವುದರ ಮೂಲಕ ಒಬ್ಬರನ್ನೊಬ್ಬರು ಕಾಲೆಳೆಯುವ ಕೆಲಸ ಮಾಡುವುದನ್ನು ಬಿಡಿ ಎಂದು ಪರೋಕ್ಷವಾಗಿ ತಿಳಿಸಿದರು.

ಈಗ ಕರ್ನಾಟಕದಲ್ಲಿ ಭ್ರಷ್ಟ ಬಿಜೆಪಿ ಸರ್ಕಾರ ಅಧಿಕಾರದಲ್ಲಿದೆ. ಇದು ಜನರಿಂದ ಆಯ್ಕೆಯಾದ ಪರಿಪೂರ್ಣ ಸರ್ಕಾರವಲ್ಲ. ಹಣದ ಬಲದಿಂದ ರಚನೆಯಾಗಿರುವ ಅನೈತಿಕ ಸರ್ಕಾರ. ನಾವು ಟಿಕೆಟ್ ನೀಡುವಾಗ ಪಕ್ಷದ ಸೇವೆಯನ್ನು ಗಮನಿಸಿ ನೀಡುತ್ತೇವೆ. ಅವರು ಪಕ್ಷಕ್ಕೆ ಪ್ರಾಮಾಣಿಕವಾಗಿದ್ದು, ಪಕ್ಷದ ಪ್ರತಿನಿಧಿಯಾಗಿದ್ದರೆ ಅವರಿಗೆ ಸೂಕ್ತ ಅವಕಾಶ, ಸ್ಥಾನಮಾನ ನೀಡಲಾಗುವುದು ಎಂದವರು ಇದೇ ಸಂದರ್ಭದಲ್ಲಿ ಹೇಳಿದ್ದಾರೆ.

ನಾನು ಮೂರು ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ನಾವು 150 ಸ್ಥಾನ ಗೆಲ್ಲುವ ಗುರಿ ಹೊಂದಬೇಕು, ಪಕ್ಷಕ್ಕೆ ದುಡಿದವರಿಗೆ ಆದ್ಯತೆ ನೀಡಬೇಕು, ಮೆರಿಟ್ ಆಧಾರದ ಮೇಲೆ ನಿರ್ಧಾರ ಕೈಗೊಳ್ಳಬೇಕು. ನಾವು ನಮ್ಮ ಕಾರ್ಯಕರ್ತರಿಗೆ ಸೂಕ್ತವಾದ ಮಾನ್ಯತೆ ನೀಡಬೇಕು ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ಮೊದಲು ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣೆ ಸಮಯದಲ್ಲಿ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿದ್ದರು. ಆದರೆ ಇಂದು ಅವರು ಕರ್ನಾಟಕಕ್ಕೆ ಬಂದು ಭ್ರಷ್ಟಾಚಾರದ ಬಗ್ಗೆ ಮಾತನಾಡಿದರೆ, ಶೇ. 40 ಕಮೀಷನ್ ಭ್ರಷ್ಟಾಚಾರ ಸರ್ಕಾರದ ಬಗ್ಗೆ ಹೇಳಿ, ನಾನು ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತೇನೆ ಎಂದರೆ ಇಡೀ ರಾಜ್ಯವೇ ನಗಲಿದೆ ಎಂದು ರಾಹುಲ್ ಹೇಳಿದ್ದಾರೆ.

ದೇಶದ ಅತಿ ದೊಡ್ಡ ಭ್ರಷ್ಟ ಸರ್ಕಾರ ಕರ್ನಾಟಕದಲ್ಲಿದೆ. ಇದು 40% ಸರ್ಕಾರ ಎಂದು ನಾವು ಹೇಳುತ್ತಿಲ್ಲ, ಗುತ್ತಿಗೆದಾರರ ಸಂಘ ಹೇಳುತ್ತಿದೆ. ಆದರೆ ಮೋದಿ ಅವರು ಬಂದು ಭ್ರಷ್ಟಾಚಾರದ ವಿರುದ್ಧ ಮಾತನಾಡಿದರೆ ಅದೊಂದು ಅಪಹಾಸ್ಯವಾಗಲಿದೆ. ಕೇವಲ ಕರ್ನಾಟಕ ಮಾತ್ರವಲ್ಲ, ದೇಶದ ಯಾವುದೇ ಭಾಗದಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತೇನೆ ಎಂದು ಹೇಳಲು ಸಾಧ್ಯವಿಲ್ಲ ಎಂದವರು ಹೇಳಿದ್ದಾರೆ.

ಕರ್ನಾಟಕದ ಯಾವುದೇ ಬಿಜೆಪಿ ನಾಯಕ, ರಾಷ್ಟ್ರೀಯ ನಾಯಕರು ನಿರುದ್ಯೋಗ, ಆರ್ಥಿಕತೆ, ಭ್ರಷ್ಟಾಚಾರದ ವಿಚಾರವಾಗಿ ಮಾತನಾಡಲು ಸಾಧ್ಯವಿಲ್ಲ. ಬಿಜೆಪಿಯ ಉದ್ದೇಶ ಬಡವರ ಹಣವನ್ನು ಕಿತ್ತುಕೊಂಡು ದೊಡ್ಡ ಉದ್ಯಮಿಗಳಿಗೆ ನೀಡುವುದಾಗಿದೆ. ಇವರು ಕೆಲವು ಉದ್ಯಮಿಗಳಿಗೆ ಹಣ ಸಂದಾಯ ಮಾಡುವ ಕೆಲಸ ಮಾಡುತ್ತಿದ್ದಾರೆ. ದೇಶವನ್ನು ಒಡೆದು ಈ ಕೆಲಸ ಮಾಡುತ್ತಿದ್ದಾರೆ ಎಂದವರು ಆರೋಪಿಸಿದ್ದಾರೆ.

## ರಾಜ್ಯಕ್ಕೆ ಭೇಟಿ ನೀಡಿದ ಸಚಿವ ಅಮಿತ್ ಷಾ

**(3ನೇ ಪುಟದಿಂದ)** ಮತ್ತು ದಾಸೋಹದ ಬಗ್ಗೆ ಭಕ್ತಿ ಭಾವದಿಂದ ಗುಣಗಾನ ಮಾಡಿದ್ದಾರೆ. ಇದಾದ ನಂತರ ಸತ್ಯಸಾಯಿ ಟ್ರಸ್ಟ್ ಕಾರ್ಯಕ್ರಮದಲ್ಲಿ ಭಾಗವಹಿಸಿದ ಗೃಹ ಸಚಿವರು, ನಂತರ ರಾಜ್ಯದ ರೈತರ ಸಂಪನ್ಮೂಲ ತರುವ ಹೈನುಗಾರಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಕೇಂದ್ರ ಮತ್ತು ರಾಜ್ಯದ ಕಾರ್ಯಕ್ರಮಗಳನ್ನು ಜನರಿಗೆ ಮುಟ್ಟಿಸುವ ಕೆಲಸ ಮಾಡಿದರು.

ದೆಹಲಿಗೆ ತೆರಳುವುದಕ್ಕೂ ಮುನ್ನ ಪಕ್ಷದ ಮುಖಂಡರೊಟ್ಟಿಗೆ ನಾಲ್ಕು ಗೋಡೆಗಳ ನಡುವೆ ಸಮಾಲೋಚನೆ ನಡೆಸಿ, ಚುನಾವಣೆಗೆ ತಯಾರಿಯಾಗುವಂತೆ ಸೂಚಿಸಿದರು. ಅಷ್ಟೇ ಅಲ್ಲ, ಚುನಾವಣೆ ಎದುರಿಸಲು ಯಾವ ತಂತ್ರಗಾರಿಕೆ ಅನುಸರಿಸಬೇಕು ಎಂಬುದರ ಬಗ್ಗೆ ಮುಖಂಡರಿಗೆ ತಿಳಿ ಹೇಳಿದರು.

ಮುಖಂಡರ ಸಭೆಯ ನಂತರ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೊಟ್ಟಿಗೆ ಪ್ರತ್ಯೇಕವಾಗಿ ಸಮಾಲೋಚನೆ ನಡೆಸಿದರು.

ಸೇನೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತಿ

# ತವರೂರಿಗೆ ಮರಳಿದ ಪರಮೇಶ್, ಪುಟ್ಟಸ್ವಾಮಿಗೆ ಅದ್ದೂರಿ ಸ್ವಾಗತ



ದಾವಣಗೆರೆ, ಏ.1- ಭಾರತೀಯ ಸೇನೆಯಲ್ಲಿ ಸುದೀರ್ಘವಾಗಿ ದೇಶ ರಕ್ಷಣೆ ಮಾಡಿ ಸೇನೆಯಿಂದ ನಿವೃತ್ತರಾಗಿ ತವರೂರಾದ ದಾವಣಗೆರೆಗೆ ಆಗಮಿಸಿದ ಸರಸ್ವತಿ ನಗರದ ಯೋಧರುಗಳಾದ ಪರಮೇಶ್ ಹಾಗೂ ಪುಟ್ಟಸ್ವಾಮಿ ಅವರನ್ನು ನಗರದ ರೈಲ್ವೆ ನಿಲ್ದಾಣದಲ್ಲಿ ಇಂದು ಅದ್ದೂರಿಯಾಗಿ ಸ್ವಾಗತಿಸಲಾಯಿತು.

ಹಿಂದೂ ಪರ ಸಂಘಟನೆ ಕಾರ್ಯಕರ್ತರು ಹಾಗೂ ಮಾಜಿ ಸೈನಿಕರುಗಳು ನಿವೃತ್ತಿ ಪಡೆದು ಬಂದ ಈ ಇಬ್ಬರೂ ಯೋಧರನ್ನು ಸ್ವಾಗತಿಸಿ, ಹೂವಿನ ಹಾರ ಹಾಕಿ ಜೈಕಾರಗಳ ಮುಖೇನ ಗೌರವಿಸಲಾಯಿತು. ನಂತರ ತೆರೆದ ವಾಹನದಲ್ಲಿ ನಗರದ ಪ್ರಮುಖ ರಸ್ತೆಗಳಲ್ಲಿ ಇಬ್ಬರೂ ಯೋಧರನ್ನು ಮೆರವಣಿಗೆ ಮಾಡಲಾಯಿತು.

ಸುದೀರ್ಘ 17 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ದಾವಣಗೆರೆಯ ಪರಮೇಶ್ ಹಾಗೂ ಪುಟ್ಟಸ್ವಾಮಿ ಇಬ್ಬರೂ ದೇಶದ ಅಹ್ಮದ್ ನಗರ, ಸೂರತ್, ಪಂಜಾಬ್, ಕಾಶ್ಮೀರಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಈ ವೇಳೆ ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ, ಉಪ ಮೇಯರ್ ರೇಖಾ, ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ನಿಕಟಪೂರ್ವ ಮೇಯರ್ ಎಸ್.ಟಿ. ವೀರೇಶ್, ಸೋಗಿ ಶಾಂತಕುಮಾರ್, ಶಿವನಗೌಡ ಪಾಟೀಲ್, ದೂಡಾ ನಿಕಟ ಪೂರ್ವ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಪಿ.ಸಿ. ಶ್ರೀನಿವಾಸ್ ಸೇರಿದಂತೆ ಇತರರಿದ್ದರು.

## ಕಾಂಗ್ರೆಸ್‌ನಿಂದ ಶ್ರೀ ಸ್ಮರಣೆ

**(3ನೇ ಪುಟದಿಂದ)** ಹರೀಶ್ ಕೆ.ಎಲ್.ಬಸಾಪುರ, ಹಿಂದುಳಿದ ಘಟಕದ ಜಮ್ನಳ್ಳಿ ನಾಗರಾಜ್, ಮುಖಂಡರುಗಳಾದ ಶ್ರೀಕಾಂತ್ ಬಗೇರ, ರಾಜು ಭಂಡಾರಿ, ಎಸ್. ರವಿ, ಗೋಪಾಲ್, ಸತೀಶ್ ರಾಜ್, ಪ್ರದೀಪ್ ರೆಡ್ಡಿ, ಬಸವರಾಜ್, ಅಜಿತ್ ಆಲೂರು, ಕಿಸಾನ್ ಕಾಂಗ್ರೆಸ್‌ನ ಬಾತಿ ಶಿವಕುಮಾರ್, ಮಹಿಳಾ ಕಾಂಗ್ರೆಸ್‌ನ ಕವಿತಾ ಚಂದ್ರಶೇಖರ್, ದ್ರಾಕ್ಷಾಯಣಮ್ಮ, ರಾಜೇಶ್ವರಿ, ನಾಗರತ್ನಮ್ಮ, ಶುಭಮಂಗಳ, ಮಂಗಳಮ್ಮ, ಗೀತಾ ಚಂದ್ರಶೇಖರ್ ಮತ್ತಿತರರಿದ್ದರು.

# ಬಿಸಿ ಊಟ : ಸ್ವಾಮೀಜಿ ಹೆಸರು

**(3ನೇ ಪುಟದಿಂದ)** ಬೊಮ್ಮಾಯಿ ಹೇಳಿದ್ದಾರೆ.

ಶಿವಕುಮಾರ ಸ್ವಾಮೀಜಿಗಳ ಈ ನೆಲದಲ್ಲಿ ಅವರ ಸ್ಫೂರ್ತಿ, ಪ್ರೇರಣೆ ಇದೆ. ಇಲ್ಲಿ ಬಂದರೆ ಮನಸ್ಸಿಗೆ ಶಾಂತಿ, ಬದುಕಿಗೆ ದಾರಿ ಸಿಗುವ ಶಕ್ತಿ ಸಿದ್ದಗಂಗಾ ಕ್ಷೇತ್ರದಲ್ಲಿ ಇದೆ. ಅದೇ ದಾರಿಯಲ್ಲಿ ಸಿದ್ದಲಿಂಗ ಸ್ವಾಮಿಗಳು ಶ್ರೀ ಶಿವಕುಮಾರ ಸ್ವಾಮಿಗಳ ಪರಂಪರೆಯನ್ನು ಅತ್ಯಂತ ಪ್ರಾಮಾಣಿಕವಾಗಿ ದಕ್ಷತೆಯಿಂದ ಜನರ ಭಾವನೆಗಳನ್ನು ಅರ್ಥ ಮಾಡಿಕೊಂಡು ಯೋಗ್ಯವಾಗಿ ಮುನ್ನಡೆಸುತ್ತಿದ್ದಾರೆ ಎಂದರು.

ಶಿವಕುಮಾರ ಸ್ವಾಮೀಜಿ ಅವರು ಸುಮಾರು 88 ವರ್ಷಗಳ ಕಾಲ ಈ ನಾಡಿನ ಸೇವೆಯನ್ನು ಮಠದ ಮುಖಾಂತರ ಮಾಡಿರುವುದು ಒಂದು ದಾಖಲೆ. ಯಾವುದೇ ಪರಮ ಪೂಜ್ಯರು ಇಷ್ಟು ದೀರ್ಘಕಾಲದ ಸೇವೆಯನ್ನು ಇಡೀ ಭಾರತ ದೇಶದಲ್ಲಿ ಮಾಡಿಲ್ಲ ಎನ್ನುವುದು ನಮ್ಮೆಲ್ಲರಿಗೂ ಅಭಿಮಾನದ ಸಂಗತಿ ಎಂದು ಬೊಮ್ಮಾಯಿ ತಿಳಿಸಿದ್ದಾರೆ.

ಅದಕ್ಕಾಗಿಯೇ ಅವರಿಗೆ ನಡೆದಾಡುವ ದೇವರು ಎಂಬ ಬಿರುದು ಬಂದಿದೆ. ಅವರು ಹಚ್ಚಿದ ಒಲೆಯ ಕಿಚ್ಚು ಸುಮಾರು 100 ವರ್ಷಕ್ಕಿಂತ ಹೆಚ್ಚಿನದಾಗಿದ್ದು, ಇಂದಿಗೂ ಉರಿಯುತ್ತಿದೆ. ಎಲ್ಲಿಯವರೆಗೆ ಈ ಅಡುಗೆ ಒಲೆಯ ಕಿಚ್ಚು ಉರಿಯುತ್ತಿರುತ್ತದೋ ಅಲ್ಲಿಯವರೆಗೂ ಬಡ ಮಕ್ಕಳ ಹೊಟ್ಟೆ ತಣ್ಣಗಿರುತ್ತದೆ ಎಂದರು.

ಶಿವಕುಮಾರ ಸ್ವಾಮೀಜಿ ಅವರು ಜಾತಿ ಕುಲ ಎಂದು ನೋಡದೆ, ಎಲ್ಲ ವರ್ಗದ ಜನರನ್ನು ಪ್ರೀತಿ ಮಾಡಿ ಬದುಕನ್ನು ಕಟ್ಟಿಕೊಟ್ಟಿದ್ದಾರೆ. ಸರ್ವೋದಯ ಮತ್ತು ಅಂತ್ಯೋದಯ ಪರಿಕಲ್ಪನೆ ಈ ಮಠದಲ್ಲಿ ನಿತ್ಯ ನಿರಂತರವಾಗಿ ನಡೆಯುತ್ತಿದೆ. ಅಂತ್ಯೋದಯ ಪರಿಕಲ್ಪನೆಯಲ್ಲಿ ಅತ್ಯಂತ ಕಟ್ಟ ಕಡೆಯ ಮನುಷ್ಯನಿಗೆ ಇಲ್ಲಿ ಸ್ಥಾನವಿದೆ. ಅವನು ತನ್ನ ಬದುಕು ಪ್ರಾರಂಭಿಸಲು ಎಲ್ಲ ರೀತಿಯ ವ್ಯವಸ್ಥೆ ಶ್ರೀಮಠದಲ್ಲಿದೆ ಎಂದು ಮುಖ್ಯಮಂತ್ರಿ ಹೇಳಿದರು.

## ವೈಮಾನಿಕ ಇಂಧನ ಬೆಲೆ ದಾಖಲೆ

**(3ನೇ ಪುಟದಿಂದ)** ಅನಿಲದ ಬೆಲೆಯನ್ನು ಯಥಾಸ್ಥಿತಿಯಲ್ಲಿ ಮುಂದುವರೆಸಲಾಗಿದೆ. ಈ ಹಿಂದೆ ಮಾರ್ಚ್ 22ರಂದು ಅಡುಗೆ ಅನಿಲದ ಬೆಲೆಯನ್ನು 50 ರೂ ಹೆಚ್ಚಿಸಲಾಗಿತ್ತು.

ಶುಕ್ರವಾರ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಇದಕ್ಕೂ ಮುಂಚೆ 11 ದಿನಗಳಲ್ಲಿ ತೈಲ ಬೆಲೆಯನ್ನು 6.40 ರೂ.ಗಳಷ್ಟು ಹೆಚ್ಚಿಸಲಾಗಿತ್ತು.

ವೈಮಾನಿಕ ಇಂಧನದ ಬೆಲೆಯನ್ನು ತಿಂಗಳಲ್ಲಿ ಎರಡು ಬಾರಿ ಪರಿಷ್ಕರಿಸಲಾಗುತ್ತದೆ. ಅಡುಗೆ ಅನಿಲದ ಬೆಲೆಯನ್ನು ತಿಂಗಳಲ್ಲಿ ಒಮ್ಮೆ ಹಾಗೂ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಪ್ರತಿದಿನ ಪರಿಷ್ಕರಿಸಲಾಗುತ್ತದೆ.

ಈ ಹಿಂದೆ ಮಾರ್ಚ್ 16ರಂದು ತೈಲ ಬೆಲೆಯನ್ನು ಅತಿ ಹೆಚ್ಚಿನ ಶೇ.18.3ರಷ್ಟು ಹೆಚ್ಚಿಸಲಾಗಿತ್ತು. ಆಗ ಪ್ರತಿ ಕಿಲೋ ಲೀಟರ್ ತೈಲದ ಬೆಲೆ 17 ಸಾವಿರ ರೂ.ಗಳಷ್ಟು ಹೆಚ್ಚಾಗಿತ್ತು.

ಜಾಗತಿಕವಾಗಿ ಕಚ್ಚಾ ತೈಲದ ಬೆಲೆ ಹೆಚ್ಚಾಗುತ್ತಿರುವುದರಿಂದ ದೇಶದಲ್ಲೂ ಇಂಧನ ಬೆಲೆ ಏರಿಕೆಯಾಗುತ್ತಿದೆ. ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸಿರುವುದು ಹಾಗೂ ಕೊರೊನಾ ಕಡಿಮೆಯಾಗಿ, ಜಾಗತಿಕವಾಗಿ ತೈಲ ಬೇಡಿಕೆ ಹೆಚ್ಚಾಗಿರುವುದು ಬೆಲೆ ಏರಿಕೆಗೆ ಪ್ರಮುಖ ಕಾರಣ.

## ಮೀಸಲಾತಿ ರದ್ದತಿಯಿಂದ ಅಸಹನೆ

**(3ನೇ ಪುಟದಿಂದ)** ಅವಕಾಶ ನೀಡದೇ ಹೋದರೆ, ಪರಿಶಿಷ್ಟ ಉದ್ಯೋಗಿಗಳಿಗೆ ಬಡ್ತಿಯಲ್ಲಿ ನೀಡಲಾಗುತ್ತಿರುವ ಮೀಸಲಾತಿ ಲಾಭ ವಾಪಸ್ ಪಡೆಯಬೇಕಾಗುತ್ತದೆ. ಇದರಿಂದಾಗಿ ಪರಿಶಿಷ್ಟ ಉದ್ಯೋಗಿಗಳ ಹುದ್ದೆಗಳನ್ನು ಬದಲಿಸಬೇಕಾಗುತ್ತದೆ, ಅವರ ವೇತನದಲ್ಲಿ ಪರಿಷ್ಕರಣೆ ಮಾಡಬೇಕಾಗುತ್ತದೆ, ಹಲವು ನಿವೃತ್ತರ ಪಿಂಚಣಿ ಬದಲಿಸಬೇಕಾಗುತ್ತದೆ. ಇದರಿಂದಾಗಿ ಹೆಚ್ಚುವರಿ ವೇತನ ಹಾಗೂ ಪಿಂಚಣಿಯನ್ನು ವಾಪಸ್ ಪಡೆಯುವ ಸಂದರ್ಭವೂ ಬರಬಹುದು. ಇದರಿಂದ ಹಲವಾರು ಮೊಕದ್ದಮೆಗಳು ಹಾಗೂ ಉದ್ಯೋಗಿಗಳಲ್ಲಿ ಅಸಹನೆ ಉಂಟಾಗುತ್ತದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಮೀಸಲಾತಿ ನೀತಿಯನ್ನು ಸಮರ್ಥಿಸಿಕೊಂಡಿರುವ ಕೇಂದ್ರ ಸರ್ಕಾರ, ಸರ್ಕಾರಿ ಉದ್ಯೋಗಗಳಲ್ಲಿ ಪರಿಶಿಷ್ಟರ ಪ್ರಾತಿನಿಧ್ಯ ಕಡಿಮೆ ಇದೆ. ಮೀಸಲಾತಿ ನೀಡುವುದರಿಂದ ಆಡಳಿತದ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ ಎಂದು ಸರ್ಕಾರ ಹೇಳಿದೆ.

75 ಸಚಿವಾಲಯಗಳು ಹಾಗೂ ಇಲಾಖೆಗಳಲ್ಲಿ 27.55 ಲಕ್ಷ ಉದ್ಯೋಗಿಗಳಿದ್ದಾರೆ. ಇವರಲ್ಲಿ 4.79 ಲಕ್ಷ ಪರಿಶಿಷ್ಟ ಜಾತಿ ಹಾಗೂ 2.14 ಲಕ್ಷ ಪರಿಶಿಷ್ಟ ಪಂಗಡದವರು. ಇತರೆ ಹಿಂದುಳಿದ ವರ್ಗಗಳ ಉದ್ಯೋಗಿಗಳ ಸಂಖ್ಯೆ 4.57 ಲಕ್ಷ ಎಂದು ಸರ್ಕಾರ ತಿಳಿಸಿದೆ.

ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಉದ್ಯೋಗದಲ್ಲಿ ಬಡ್ತಿ ಕಲ್ಪಿಸುವ ಸಂಬಂಧ ಲಭ್ಯವಿರುವ ಮಾಹಿತಿಯನ್ನು ಪ್ರಮಾಣ ಪತ್ರದಲ್ಲಿ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಈ ಹಿಂದೆ ಕೇಂದ್ರ ಸರ್ಕಾರಕ್ಕೆ ತಿಳಿಸಿತ್ತು

ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಬಡ್ತಿಯಲ್ಲಿ ಮೀಸಲಾತಿ ಕಲ್ಪಿಸುವ ಸಂಬಂಧ ಯಾವುದೇ ಮಾನದಂಡ ರೂಪಿಸಲು ನ್ಯಾಯಾಲಯ ನಿರಾಕರಿಸಿತ್ತು. ಅಸಮರ್ಪಕ ಪ್ರಾತಿನಿಧ್ಯ ಇದ್ದರೆ ಕ್ರಮ ತೆಗೆದುಕೊಳ್ಳುವುದು ಸರ್ಕಾರದ ವಿವೇಚನೆಗೆ ಬಿಟ್ಟದ್ದು ಎಂದು ನ್ಯಾಯಾಲಯ ಹೇಳಿತ್ತು.

## ಕರ್ನಾಟಕ ಪ್ರಸ್ತಾವನೆ ಕಳಿಸಿಲ್ಲ : ಕೇಂದ್ರ

**(3ನೇ ಪುಟದಿಂದ)** ಹೇಳಿದರು. ರಾಗಿಯನ್ನು ಕನಿಷ್ಠ ಬೆಂಬಲ ಬೆಲೆಯಲ್ಲಿ ಖರೀದಿಸಲಾಗುತ್ತಿದೆ ಎಂದು ರಾಜ್ಯ ಸರ್ಕಾರ ತಿಳಿಸಿದೆ. ಇದಕ್ಕೆ ಕೇಂದ್ರ ಸರ್ಕಾರ ಈಗಾಗಲೇ ಅನುಮತಿ ನೀಡಿದೆ ಎಂದು ಗೋಯಲ್ ಹೇಳಿದರು.

ಅಕ್ಕಿ ಹಾಗೂ ಗೋಧಿ ಹೊರತಾಗಿ ಯಾವುದೇ ಬೆಳೆಯನ್ನು ರಾಜ್ಯ ಸರ್ಕಾರಗಳು ಖರೀದಿ ಮಾಡಿ, ಪಡಿತರ ಮೂಲಕ ವಿತರಿಸಬಹುದು. ಆದರೆ, ರಾಗಿ ಇಲ್ಲವೇ ಮೆಕ್ಕೆಜೋಳವನ್ನು ಕೇಂದ್ರ ಸರ್ಕಾರ ತನ್ನ ಪಾಲಿನಿಂದ ಖರೀದಿಸುವುದಿಲ್ಲ ಎಂದವರು ತಿಳಿಸಿದ್ದಾರೆ.

## ಸಿದ್ದಗಂಗಾ ಶ್ರೀಗಳಿಗೆ ಮೋದಿ ನಮನ

**(3ನೇ ಪುಟದಿಂದ)** ಶಿಕ್ಷಣ ಕ್ಷೇತ್ರಕ್ಕೆ ಅವರು ನೀಡಿದ ಪ್ರಾಮುಖ್ಯತೆ ಹಾಗು ಸರಿಸಾಟಿಯಿಲ್ಲದ ಅವರ ಸಾಮುದಾಯಿಕ ಸೇವೆಯಿಂದಾಗಿ ಅವರು ಸದಾ ಸ್ಮರಣೀಯರು. ಅವರ ಕನಸುಗಳನ್ನು ಈಡೇರಿಸಲು ನಾವು ಶ್ರಮಿಸೋಣ ಎಂದೂ ಪ್ರಧಾನಿ ತಿಳಿಸಿದ್ದಾರೆ.

## ರೇಣುಕಾಚಾರ್ಯ ಗಡೀಪಾರಿಗೆ ಆಗ್ರಹ

**(3ನೇ ಪುಟದಿಂದ)** ಸಂಘಟನೆಗಳು ಆಗ್ರಹಿಸಿವೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಸಂಘಟನೆಗಳ ಪರವಾಗಿ ಮಾತನಾಡಿದ ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಡಾ.ವೈ.ರಾಮಪ್ಪ, ನಕಲಿ ಜಾತಿ ಪ್ರಮಾಣ ಪತ್ರ ಪಡೆದಿರುವ ಬಗ್ಗೆ ಚರ್ಚಿಸಲು ಹೊನ್ನಾಳಿ ಕ್ರೀಡಾಂಗಣಕ್ಕೆ ಬರುತ್ತೇವೆ. ಅಥವಾ ರೇಣುಕಾಚಾರ್ಯರೇ ಹೈಸ್ಕೂಲ್ ಮೈದಾನಕ್ಕೆ ಬರಲಿ ಅಥವಾ ಬೆಂಗಳೂರಿನ ವಿಧಾನ ಸೌಧದ ಮುಂದಾದರೂ ಮುಖ್ಯಮಂತ್ರಿಗಳ ಸಮ್ಮುಖದಲ್ಲಿಯೇ ಚರ್ಚೆಗೆ ಸಿದ್ಧರಾಗಿದ್ದೇವೆ ಎಂದು ಸವಾಲು ಹಾಕಿದರು.

ಹೊನ್ನಾಳಿ ತಾಲ್ಲೂಕು ಕುಂದೂರಿನಲ್ಲಿ ಜನಿಸಿರುವ ದಾರುಕೇಶ್ವರಯ್ಯ, ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ಪ್ರಮಾಣ ಪತ್ರ ಪಡೆದಿದ್ದಾರೆ. ಎಸ್ಸಿ-ಎಸ್ಟಿ, ಒಬಿಸಿ ಅಧಿನಿಯಮ 7ರ ಕಾಯ್ದೆಯಡಿ ಜಾತಿ ಪ್ರಮಾಣ ಪತ್ರ ನೀಡುವಾಗ ಅಧಿಕಾರಿಗಳು ಅವರ ಹಿನ್ನೆಲೆ ಪರಿಶೀಲಿಸಿಯೇ ನೀಡಬೇಕು. ಆದರೆ ತಹಶೀಲ್ದಾರ್ ಅವರು ಪ್ರಮಾಣ ಪತ್ರ ನೀಡಿರುವುದು ನೋಡಿದರೆ ರೇಣುಕಾಚಾರ್ಯರು ತಮ್ಮ ಪ್ರಭಾವ ಬಳಸಿರುವುದು ಸ್ಪಷ್ಟ ಎಂದರು.

ಮಾ.28 ರಂದು ಪ್ರೆಸ್ ಕ್ಲಬ್ ಮುಂದೆ ನಡೆದ ಘಟನೆ ಕುರಿತಂತೆ ದಾರುಕೇಶ್ವರಯ್ಯ, 13 ಜನ ದಲಿತ ಹೋರಾಟಗಾರರ ಮೇಲೆ ಸುಳ್ಳು ಮೊಕದ್ದಮೆ ದಾಖಲಿಸಿದ್ದಾರೆ. ಪರಿಶಿಷ್ಟ ಜಾತಿಯ ಶಾಸಕರನ್ನು ಅವಮಾನಿಸಿದ್ದ ಅವರ ಮೇಲೆ ಪೊಲೀಸರು ಮೊಕದ್ದಮೆ ದಾಖಲಿಸದೆ, ರಕ್ಷಣೆಯಲ್ಲಿ ಕರೆದೊಯ್ದಿದ್ದಾರೆ ಎಂದು ಕಿಡಿಕಾರಿದರು.

ಎಂ.ಪಿ. ರೇಣುಕಾಚಾರ್ಯ ಹಾಗೂ ಅವರ ಸಹೋದರನನ್ನು ಗಡೀಪಾರು ಮಾಡುವವರೆಗೆ ಜಿಲ್ಲೆ ಹಾಗೂ ರಾಜ್ಯಾದ್ಯಂತ ಹೋರಾಟ ತೀವ್ರಗೊಳಿಸುವುದಾಗಿ ರಾಮಪ್ಪ ಎಚ್ಚರಿಸಿದರು.

ಲಂಬಾಣಿ ಸಮಾಜದ ಅಧ್ಯಕ್ಷ ರಾಘವೇಂದ್ರ ನಾಯ್ಕ ಮಾತನಾಡಿ, ರೇಣುಕಾಚಾರ್ಯ ಹಾಗೂ ಅವರ ಸಹೋದರರ ನಡೆ ಜಂಗಮರ ಪಾವಿತ್ರ್ಯಕ್ಕೆ ಕಳಂಕ ತರುವ ಕೆಲಸ ಎಂದರು. ವಿವಿಧ ಸಂಘಟನೆಗಳ ಮುಖಂಡರು ಗಳಾದ ಎಸ್.ಶೇಖರಪ್ಪ, ಹೂವಿನಮಡು ಚನ್ನಬಸಪ್ಪ, ಶ್ರೀನಿವಾಸ, ಕುಂದುವಾಡ ಮಂಜುನಾಥ್, ಬಿ.ದುಗ್ಗಪ್ಪ, ಶೇಖರನಾಯ್ಕ, ಮಾರಪ್ಪ, ಸಿ.ಜಯಪ್ಪ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಸಮಾಜಕ್ಕಾಗಿ ಶ್ರಮಿಸಿದ ಸಿದ್ಧಗಂಗಾ ಶ್ರೀಗಳು

**(3ನೇ ಪುಟದಿಂದ)** ಮಾತುಗಳನ್ನಾಡಿದರು.

ಸಮಿತಿಯ ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯರಾದ ಶಶಿಕಲಾ ಮಾತನಾಡುತ್ತಾ, ಹಾನಗಲ್ ಕುಮಾರ ಶ್ರೀಗಳು, ಡಾ.ಪುಟ್ಟರಾಜ ಗವಾಯಿಗಳು, ಸಿದ್ಧಗಂಗಾ ಶ್ರೀಗಳು ನಮ್ಮ ನಾಡಿನ ಮೂರು ಮಹಾ ಬೆಳಕುಗಳು ಎಂದು ಬಣ್ಣಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಸಮಿತಿಯ ಅಧ್ಯಕ್ಷ ದೇವರಮನೆ ಶಿವಕುಮಾರ್, ರಾಷ್ಟ್ರೀಯ ಉಪಾಧ್ಯಕ್ಷ ಎಸ್.ಎಸ್. ಗಣೇಶ್, ರಾಷ್ಟ್ರೀಯ ಯುವ ಘಟಕದ ಅಧ್ಯಕ್ಷರಾದ ಅಣಬೇರು ಸಂದೀಪ್, ದಾವಣಗೆರೆ ನಗರ ಮಹಿಳಾ ಘಟಕದ ಅಧ್ಯಕ್ಷರಾದ ಪುಷ್ಪಾ ವಾಲಿ, ಜಗಳೂರು ತಾಲ್ಲೂಕು ಮಹಿಳಾ ಘಟಕದ ಅಧ್ಯಕ್ಷರಾದ ರೇಖಾ, ಜಿಲ್ಲಾ ವಾಣಿಜ್ಯ ಕೈಗಾರಿಕೋದ್ಯಮ ಘಟಕದ ಅಧ್ಯಕ್ಷ ಐಗೂರು ಚಂದ್ರಣ್ಣ, ಸಂಚಾಲಕ ಸೋಗಿ ಮುರುಗೇಶ್ ಉಪಸ್ಥಿತರಿದ್ದರು. ಬಿ.ಎಸ್. ರಮೇಶ್ ನಿರೂಪಿಸಿದರು.


ಯುಗಾದಿ ಹಬ್ಬದ ಶುಭಾಶಯಗಳು

'ಶುಭಕೃತು ನಾಮ ಸಂವತ್ಸರ'ವು ಸರ್ವರಿಗೂ ಆರೋಗ್ಯ ಹಾಗೂ ಸುರಕ್ಷತೆ ತರಲಿ ಎಂದು ಹಾರೈಸುವ...

ನಲ್ಲೂರು ಎಸ್. ರಾಘವೇಂದ್ರ, ಮಾಲೀಕರು, ನಲ್ಲೂರು ಶಾಂತಾರಾಮ್ ಜ್ಯೂಯಲರ್ಸ್

ಸಾರಥಿ ಬಸವರಾಜ್, ಲ್ಯಾಂಡ್ ಡೆವಲಪರ್ಸ್

ಬೆಳ್ಳೂಡಿ ಮಂಜುನಾಥ್, ಸಾಮಾಜಿಕ ಸೇವಾ ಕಾರ್ಯಕರ್ತರು

ಗಿರೀಶ್ ಹೆಚ್., ಕಲರ್ಸ್ ಡ್ಯಾನ್ಸ್ ಅಕಾಡೆಮಿ



ಹಾರ್ದಿಕ ಅಭಿನಂದನೆಗಳು



ದಿ|| ಶ್ರೀಮತಿ ನೀಲಮ್ಮ
ದಿ|| ಶಂಕ್ರಪ್ಪ ಬಿ. ಗೌಡಶಿವಣ್ಣವರ
ಇವರ ಸ್ಮರಣಾರ್ಥ ಇವರ ಮಗನಾದ
ಶ್ರೀ ಮಂಜುನಾಥ ಶಂಕ್ರಪ್ಪ ಗೌಡಶಿವಣ್ಣನವರು
ನಗರಸಭೆ ಮಾಜಿ ಸದಸ್ಯರು, ರಾಣೇಬೆನ್ನೂರು
ಹಾಗೂ ಅಭಿಮಾನಿ ಬಳಗದ ವತಿಯಿಂದ ದ್ವಿತೀಯ ಬಾರಿಗೆ
ಪೂಜ್ಯ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ 101 ಜೊತೆ ಉಚಿತ
ಸರ್ವಧರ್ಮ ಸಾಮೂಹಿಕ ವಿವಾಹ ಜರುಗಲಿದೆ
ದಿನಾಂಕ: 28-04-2022ರ ಗುರುವಾರ ರಾಣೇಬೆನ್ನೂರು
ನಗರದ ಯರೇಕುಪ್ಪಿ ರಸ್ತೆಯ ಜಮೀನಿನಲ್ಲಿ ನಡೆಯಲಿದೆ.
ಈ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಜರುಗಬೇಕೆಂದು ಆಶಿಸುತ್ತೇನೆ.

ಶುಭ ಕೋರುವವರು: ಶ್ರೀ ಈರಣ್ಣ ಮಾಕನೂರು, ಮುಖಂಡರು, ರಾಣೇಬೆನ್ನೂರು.
ವಿವಾಹವಾಗಲು ಇಚ್ಛಿಸುವವರು ದಿನಾಂಕ: 10.04.2022ರ ಒಳಗಾಗಿ ತಮ್ಮ ಹೆಸರನ್ನು ನೋಂದಾಯಿಸಬೇಕು.
ಹಾವೇರಿ ಜಿಲ್ಲೆಯ ವಧು-ವರರಿಗೆ ಮೊದಲ ಆದ್ಯತೆ ನೀಡಲಾಗುವುದು.
ಮೊ.: 98444 90443, 70193 66433, 99164 87175, 97417 98868



ಸರ್ವರಿಗೂ ಯುಗಾದಿ ಹಬ್ಬದ ಶುಭಾಶಯಗಳು...

ನಮ್ಮೆಲ್ಲಾ ಗ್ರಾಹಕರಿಗೂ, ಹಿತೈಷಿಗಳಿಗೂ, ಸ್ನೇಹಿತರಿಗೂ, ನಾಮದೇವ ಸಿಂಪಿ ಸಮಾಜದ ಸಮಸ್ತ ಬಾಂಧವರಿಗೂ 'ಶ್ರೀ ಶುಭಕೃತು ನಾಮ ಸಂವತ್ಸರ'ವು ಆಯುರಾರೋಗ್ಯ-ಐಶ್ವರ್ಯವನ್ನಿತ್ತು ಕಾಪಾಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ... ಯುಗಾದಿ ಹಬ್ಬದ ಶುಭಾಶಯಗಳು.

ಎಂ.ಎಸ್. ವಿಠ್ಠಲ್
ಮಾಜಿ ಮಹಾಪೌರರು, ಮಹಾನಗರ ಪಾಲಿಕೆ, ದಾವಣಗೆರೆ.
ಅಧ್ಯಕ್ಷರು, ನಾಮದೇವ ಸಿಂಪಿ ಸಮಾಜ, ದಾವಣಗೆರೆ.
ಮಾಲೀಕರು : ಮಹೇಂದ್ರಕರ್ ಟೆಕ್ಸ್‌ಟೈಲ್ಸ್

ಎಂ.ವಿ. ಸುಮಂತ್ (ಗಣೇಶ್)

ಮತ್ತು ಸಿಬ್ಬಂದಿ ವರ್ಗ
ಮಹೇಂದ್ರಕರ್ ಟೆಕ್ಸ್‌ಟೈಲ್ಸ್, ನರಸರಾಜ ರಸ್ತೆ, ದಾವಣಗೆರೆ.



ಉಚ್ಚಂಗಿದುರ್ಗದ ಶ್ರೀ ಉಚ್ಚಂಗಮ್ಮ ದೇವಿ ಜಾತ್ರಾ ಮಹೋತ್ಸವಕ್ಕೆ ಆಗಮಿಸುತ್ತಿರುವ ಭಕ್ತಾದಿಗಳಿಗೂ, ನಾಡಿನ ಸಮಸ್ತ ಜನತೆಗೂ ಯುಗಾದಿ ಹಬ್ಬದ ಶುಭಾಶಯಗಳು.

ಶ್ರೀಮತಿ ಲಕ್ಷ್ಮಿದೇವಿ ಬಿ. ವೀರಣ್ಣ, ಮಹಾನಗರ ಪಾಲಿಕೆ ಮಾಜಿ ಸದಸ್ಯರು

ಬಿ. ವೀರಣ್ಣ, ಜಿಲ್ಲಾಧ್ಯಕ್ಷರು, ವಾಲ್ಮೀಕಿ ಸಮಾಜ, ಮಾಜಿ ಅಧ್ಯಕ್ಷರು, ನಗರಸಭೆ, ಕಾಂಗ್ರೆಸ್ ಮುಖಂಡರು, ದಾವಣಗೆರೆ

ಬಿ. ವಿ. ಪ್ರಮೋದ್ ಕುಮಾರ್

ಬಿ.ವಿ ಪರಶುರಾಮ್

ಬಿ.ವಿ ಪ್ರಜ್ವಲ್

ವಿನಾಯಕ ಪೈಲ್ವಾನ್, ಮಹಾನಗರ ಪಾಲಿಕೆ ಸದಸ್ಯರು, 7ನೇ ವಾರ್ಡ್ ದಾವಣಗೆರೆ.

ಬಿ.ಕೆ. ರಾಮಕೃಷ್ಣ ಬಿ.ಕೆ. ರಾಘವೇಂದ್ರ ಪವನ್ ಕುಮಾರ್



ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,

ಮುಖ್ಯ ಕಛೇರಿ : ನಂ.75/1, ತುಳಸಿ ಕಾಂಪ್ಲೆಕ್ಸ್, 1ನೇ ಮಹಡಿ, ವಸಂತ ರಸ್ತೆ, ದಾವಣಗೆರೆ-01. ಫೋ : 08192-271472
ಶಾಖಾ ಕಛೇರಿ : ಹೆಚ್.ಕೆ.ಆರ್. ಸರ್ಕಲ್, ನಿಟುವಳ್ಳಿ ದಾವಣಗೆರೆ. ಫೋ : 08192-264536

ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು

ನಮ್ಮ ಸೊಸೈಟಿಯ ಎಲ್ಲಾ ಸದಸ್ಯ ಸಹಕಾರಿ ಬಾಂಧವರಿಗೆ, ಗ್ರಾಹಕರಿಗೆ ಹಾಗೂ ಸಮಸ್ತ ಜನತೆಗೆ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು.


ಬಿ.ವಿ. ಶಿವಾನಂದ, ಅಧ್ಯಕ್ಷರು ಆರ್. ವಿಜಯಕುಮಾರ್, ಉಪಾಧ್ಯಕ್ಷರು

ನಿರ್ದೇಶಕರುಗಳು :

✦ ಬಿ.ನಾಗೇಂದ್ರಾಚಾರ್ (ಬಸಾಪುರ)
✦ ಹೆಚ್.ಎನ್.ಜಯಾಚಾರ್ (ಹಿರೇಮೇಗಳಗೆರೆ)
✦ ಎಂ.ಪಿ.ನಾಗರಾಜ್ (ಶಾಮನೂರು)
✦ ಎನ್.ಪೂರ್ವಾಚಾರ್
✦ ಆರ್.ರೇಖಾ ರಮೇಶ್
✦ ಭಾಗ್ಯಮ್ಮ ಮಂಜುನಾಥ
✦ ಎ.ಬಿ. ರವಿ
✦ ಬಿ. ಸಿದ್ದಾಚಾರ್
✦ ಎಸ್.ನಾಗರಾಜಾಚಾರ್ (ಮಾಯಕೊಂಡ)
✦ ವಿ.ಎಂ.ಕೊಟ್ರೇಶಾಚಾರ್
✦ ನೀಲಾವತಿ ಮಂಜುನಾಥಾಚಾರ್

✦ ಸಿ.ಆರ್.ಬಡಿಗೇರ್, ಕಾರ್ಯದರ್ಶಿ ✦ ಬಿ.ಎನ್. ಭೀಷ್ಮಾಚಾರ್, ಶಾಖಾ ವ್ಯವಸ್ಥಾಪಕರು

## ಕನಿಷ್ಠ ಬೆಂಬಲ ಬೆಲೆ ಕಾನೂನು ಬದ್ಧಗೊಳಿಸಲು ವರುಣ್ ಗಾಂಧಿ ಮಸೂದೆ



ನವದೆಹಲಿ, ಏ. 1 – ಕೃಷಿ ಉತ್ಪನ್ನಗಳ ಕನಿಷ್ಠ ಬೆಂಬಲ ಬೆಲೆಯನ್ನು ಕಾನೂನು ಬದ್ಧಗೊಳಿಸುವ ಖಾಸಗಿ ಮಸೂದೆಯನ್ನು ಬಿಜೆಪಿ ಸಂಸದ ವರುಣ್ ಗಾಂಧಿ ಸಂಸತ್ತಿನಲ್ಲಿ ಮಂಡಿಸಿದ್ದಾರೆ. ಕಾಂಗ್ರೆಸ್ ಸಂಸದ ಶಶಿ ಥರೂರ್ ಅವರು ಅಕ್ರಮ ಚಟುವಟಿಕೆಗಳ (ತಡೆ) ಕಾಯ್ದೆ ರದ್ದುಗೊಳಿಸುವ ಖಾಸಗಿ ಮಸೂದೆಯನ್ನು ಮಂಡಿಸಿದ್ದಾರೆ.

ರೈತರು ಬೆಳೆಯುವ ಎಲ್ಲ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯ ಗ್ಯಾರಂಟಿ ನೀಡಲು ವರುಣ್ ಗಾಂಧಿ ಮಂಡಿಸಿದ ಮಸೂದೆ ಉದ್ದೇಶಿಸಿದೆ.
















JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte